# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 90(595) |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18-07-2023 |
| ಉತ್ತರಿಸುವವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ವೃತ್ತ ಮತ್ತು ರಸ್ತೆಗಳಿಗೆ ಅಧಿಕೃತವಾಗಿ ನಾಮಕರಣ ಮಾಡಿರುವ ಹೆಸರುಗಳೇನು; (ಸಂಪೂರ್ಣ ವಿವರ ನೀಡುವುದು) | ಸರ್ಕಾರವು ಮಂಡ್ಯ ನಗರಸಭೆಯ ವ್ಯಾಪ್ತಿಯ 10 ರಸ್ತೆಗಳಿಗೆ ಮತ್ತು 02 ವೃತ್ತಗಳಿಗೆ ಅಧಿಕೃತವಾಗಿ ನಾಮಕರಣ ಮಾಡಿರುವ ಹೆಸರುಗಳ ಸಂಪೂರ್ಣ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ಸರ್ಕಾರದ ಅನುಮೋದನೆ ಇಲ್ಲದೆ ಮಂಡ್ಯ ನಗರಸಭೆಯ ವ್ಯಾಪ್ತಿಯಲ್ಲಿ ವಿವಿಧ ವೃತ್ತ ಮತ್ತು ರಸ್ತೆಗಳಿಗೆ ಅನಧಿಕೃತವಾಗಿ ಹೆಸರು ನಾಮಕರಣ ಮಾಡಿ ನಾಮಫಲಕ ಅಳವಡಿಸಿರುವುದು ಮತ್ತು ಕೆಲವೆಡೆ ಪುತ್ಥಳಿ ಸ್ಥಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಇ) | ಬಂದಿದ್ದಲ್ಲಿ, ಅನಧಿಕೃತವಾಗಿ ಅಳವಡಿಸಿರುವ ನಾಮಫಲಕಗಳು ಮತ್ತು ಪುತ್ಥಳಿಗಳ ತೆರವಿಗಾಗಿ ತೆಗೆದುಕೊಂಡಿರುವ ಕ್ರಮಗಳೇನು; ಈ ನಾಮಫಲಕಗಳನ್ನು ಯಾವ ಕಾಲಮಿತಿಯಲ್ಲಿ ತೆರವುಗೊಳಿಸಲಾಗುವುದು; (ವಿವರ ನೀಡುವುದು) | ಮಂಡ್ಯ ನಗರಸಭೆಯ ವ್ಯಾಪ್ತಿಯಲ್ಲಿ 11 ರಸ್ತೆಗಳಲ್ಲಿ 04 ರಸ್ತೆಗಳಿಗೆ ನಾಮಕರಣ ಮಾಡಲು ಕೌನ್ಸಿಲ್ ಸಭೆಯಲ್ಲಿ ತೀರ್ಮಾನವಾಗಿದ್ದು, ಸರ್ಕಾರದ ಅನುಮೋದನೆಯಾಗಿರುವ ಬಗ್ಗೆ ಕಂಡು ಬಂದಿರುವುದಿಲ್ಲ ಮತ್ತು 08 ವೃತ್ತಗಳಲ್ಲಿ 05 ವೃತ್ತಗಳಿಗೆ ನಾಮಕರಣ ಮಾಡಲು ಕೌನ್ಸಿಲ್ ಸಭೆಯಲ್ಲಿ ತೀರ್ಮಾನವಾಗಿದ್ದು, ಸರ್ಕಾರದ ಅನುಮೋದನೆಯಾಗಿರುವ ಬಗ್ಗೆ ಕಂಡು ಬಂದಿರುವುದಿಲ್ಲ. ಅನಧಿಕೃತವಾಗಿ ನಾಮಕರಣ ಮಾಡಿ ನಾಮಫಲಕ ಅಳವಡಿಸಿರುವ ಮತ್ತು 03 ಪುತ್ಥಳಿ ಸ್ಥಾಪಿಸಿರುವ ಮಾಹಿತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ.<br><br>ಕೌನ್ಸಿಲ್ ಅನುಮೋದನೆಯಾಗಿರುವ ಪ್ರಕರಣಗಳಿಗೆ ಸರ್ಕಾರದ ಸುತ್ತೋಲೆಯ ರೀತ್ಯಾ ಕ್ರಮವಹಿಸಿ ಸರ್ಕಾರದ ಅನುಮೋದನೆ ಪಡೆಯಲು ಕ್ರಮವಹಿಸಲಾಗುವುದು. ಕೌನ್ಸಿಲ್ ಅನುಮೋದನೆಯಾಗದ ಪ್ರಕರಣಗಳಿಗೆ ಕೌನ್ಸಿಲ್‌ಗೆ ಮಂಡಿಸಿ ಸರ್ಕಾರದ ಸುತ್ತೋಲೆಯ ರೀತ್ಯಾ ಕ್ರಮವಹಿಸಿ ಸರ್ಕಾರದ ಅನುಮೋದನೆ ಪಡೆಯಲು ಕ್ರಮವಹಿಸಲಾಗುವುದು. ಉಳಿದ ಪ್ರಕರಣಗಳಲ್ಲಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಏರ್ಪಡಿಸಿಕೊಂಡು ಅನಧಿಕೃತವಾಗಿ ಅಳವಡಿಸಿರುವ ರಸ್ತೆ, ವೃತ್ತಗಳ ನಾಮಫಲಕ ಮತ್ತು ಪುತ್ಥಳಿಗಳ ತೆರವಿಗೆ ಶೀಘ್ರವಾಗಿ ನಿಯಮಾನುಸಾರ ಕ್ರಮ ವಹಿಸಲಾಗುವುದು. |
| ಈ) | ಸರ್ಕಾರ ಅಧಿಕೃತವಾಗಿ ಘೋಷಿಸಿರುವ ಹೆಸರುಗಳನ್ನು ಹೊರತುಪಡಿಸಿ, ಸಾರ್ವಜನಿಕವಾಗಿ ಹೆಸರು ತಪ್ಪಾಗಿ ಬಳಕೆಯಲ್ಲಿರುವ ವೃತ್ತ ಮತ್ತು ರಸ್ತೆಗಳು ಯಾವುವು; (ಮಾಹಿತಿ ನೀಡುವುದು) | ಸರ್ಕಾರ ಅಧಿಕೃತವಾಗಿ ಘೋಷಿಸಿರುವ ಹೆಸರುಗಳನ್ನು ಹೊರತುಪಡಿಸಿ, ಸಾರ್ವಜನಿಕವಾಗಿ ಹೆಸರು ತಪ್ಪಾಗಿ ಬಳಕೆಯಲ್ಲಿರುವ 08 ರಸ್ತೆಗಳು ಮತ್ತು 02 ವೃತ್ತಗಳ ಮಾಹಿತಿಗಳನ್ನು **ಅನುಬಂಧ-3**ರಲ್ಲಿ ಲಗತ್ತಿಸಿದೆ. |

Scanned with CamScanner

| | | |
|---|---|---|
| ಉ) | ಅಧಿಕೃತವಾಗಿ ಘೋಷಿಸಿರುವ ಹೆಸರುಗಳನ್ನು ಸದರಿ ವೃತ್ತ ಮತ್ತು ರಸ್ತೆಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ನಾಮಫಲಕ ಅಳವಡಿಸಲು ತೆಗೆದುಕೊಂಡಿರುವ ಕ್ರಮಗಳೇನು: (ವಿವರ ನೀಡುವುದು) | ಅಧಿಕೃತವಾಗಿ ಘೋಷಿಸಿರುವ 02 ವೃತ್ತಗಳಿಗೂ ಮತ್ತು 10 ರಸ್ತೆಗಳ ಪೈಕಿ 4 ರಸ್ತೆಗಳಿಗೆ ನಾಮಫಲಕ ಅಳವಡಿಸಲಾಗಿರುತ್ತದೆ. ಉಳಿದ 6 ರಸ್ತೆಗಳಿಗೆ ಹೆಸರು ಮತ್ತು ನಾಮಫಲಕಗಳನ್ನು ಶೀಘ್ರವಾಗಿ ಸಾರ್ವಜನಿಕರ ಮಾಹಿತಿಗಾಗಿ ಅಳವಡಿಸಲು ಕ್ರಮ ವಹಿಸಲಾಗುವುದು. ಮಾಹಿತಿಯನ್ನು ಅನುಬಂಧ-4ರಲ್ಲಿ ಲಗತ್ತಿಸಿದೆ. |
| ಊ) | ಸರ್ಕಾರದಿಂದ ಯಾವುದೇ ವೃತ್ತ ಅಥವಾ ರಸ್ತೆಗಳಿಗೆ ಹೆಸರು ನಾಮಕರಣ ಮಾಡುವಾಗ ಅನುಸರಿಸುವ ಮಾನದಂಡಗಳೇನು? (ಆದೇಶದ ಪ್ರತಿಯೊಂದಿಗೆ ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಪುರಸಭಾ ಕಾಯ್ದೆ 1964ರ ಕಲಂ 211ರ ರೀತ್ಯಾ ಸರ್ಕಾರದಿಂದ ಪೂರ್ವಾನುಮೋದನೆ ಪಡೆದು ಯಾವುದೇ ವೃತ್ತ ಅಥವಾ ರಸ್ತೆಗಳಿಗೆ ಹೆಸರು ನಾಮಕರಣ ಮಾಡಬೇಕಾಗಿರುತ್ತದೆ ಹಾಗೂ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಪೌನಿ: ಕೇಂ.ಸಾಎಸ್.ಎನ್.ಎಸ್.:05:87-88, ದಿನಾಂಕ: 28-10-1987 ಮತ್ತು ಪೌನಿ:ಜಿ.ಪಿ.ಎಸ್: ಪ್ರತಿಮೆ:ನಾಮ:ಸಿ.ಆರ್:2012-13, ದಿನಾಂಕ:17-12-2012ರಲ್ಲಿ ನಿಗದಿಪಡಿಸಿದಂತಹ ಮಾನದಂಡನೆಗಳ ವಿವರ ಈ ಕೆಳಕಂಡಂತೆ ವಿವರಿಸಿದೆ.<br><br>1. ಸರ್ಕಾರದ/ಸಾರ್ವಜನಿಕರ ಜಾಗದಲ್ಲಿ ಯಾವುದೇ ಸಂತರ/ಶರಣರ, ಜನ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪಿಸುವುದನ್ನು ನಿರ್ಬಂಧಿಸಿದೆ.<br>2. ಪ್ರತಿಮೆ ಸ್ಥಾಪಿಸುವುದಕ್ಕೆ ಸಂಘ ಸಂಸ್ಥೆಗಳು ಮುಂದೆ ಬಂದಲ್ಲಿ ಪ್ರಾಥಮಿಕವಾಗಿ ಅಂತಹ ಸಂಘ ಸಂಸ್ಥೆಗಳು ತಮಗೆ ಸೇರಿದ ನಿವೇಶನದಲ್ಲಿ ಪ್ರತಿಮೆಯನ್ನು ನಿರ್ಮಿಸುವ ಹಾಗೂ ಅವುಗಳ ಭದ್ರತೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಮುಚ್ಚಳಿಕೆ ನೀಡತಕ್ಕದ್ದು.<br>3. ಮಂಜೂರಾತಿ ಪಡೆದು ಸ್ಥಾಪಿಸಲಾದ ಪ್ರತಿಮೆಗಳ ನಿರ್ವಹಣೆಯನ್ನು ಆಯಾ ಸಂಘ ಸಂಸ್ಥೆಗಳೇ ನಿರ್ವಹಿಸತಕ್ಕದ್ದು.<br>4. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಕೌನ್ಸಿಲ್ ಅಧಿವೇಶನದಲ್ಲಿ ಠರಾವು ಮಾಡಿದ ಪ್ರಸ್ತಾವನೆಯನ್ನು ಸಾರ್ವಜನಿಕರ ಗಮನಕ್ಕೆ ಸ್ಥಳೀಯ ಪತ್ರಿಕೆಗಳ ಮುಖಾಂತರ ಪ್ರಚುರ ಪಡಿಸುವುದು.<br>5. ನಗರ ಸ್ಥಳೀಯ ಸಂಸ್ಥೆಯು ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿಯ ನೋಟೀಸ್ ಬೋರ್ಡ್‌ನಲ್ಲಿ ಸಾರ್ವಜನಿಕರ ಗಮನಕ್ಕೆ ಬರುವಂತೆ ಪ್ರಕಟಣೆ ವಹಿಸುವುದು.<br>6. ಅನಂತರ ಪ್ರಚುರಪಡಿಸಿದ ಬಗ್ಗೆ ಪಂಚನಾಮೆ ಮಾಡಿ, ಈ ಬಗ್ಗೆ ಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆಗಳಿಗೆ 30 ದಿನಗಳ ಕಾಲಾವಕಾಶ ಕೊಡುವುದು.<br>7. ಸಾರ್ವಜನಿಕರಿಂದ ಬಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಸಂಬಂಧಿಸಿದ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಯ ಗಮನಕ್ಕೆ ತಂದು ಪುನಃ ಠರಾವು ಪಾಸು ಮಾಡಿಸುವುದು.<br>8. ಹೀಗೆ ಠರಾವು ಮಾಡಿದ ವಿಷಯದ ಬಗ್ಗೆ ರಸ್ತೆಗೆ ಹೆಸರು ಇಟ್ಟರೆ ಅಥವಾ ಯಾವುದಾದರೂ ಪ್ರತಿಮೆ ಸ್ಥಾಪಿಸಿದರೆ ಅದರಿಂದ ಯಾವ ರೀತಿಯ ಗಲಭೆ ಆಗುವ ಸಾಧ್ಯತೆ ಇಲ್ಲ ಎಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವರದಿ ಪಡೆದು ಪ್ರಸ್ತಾವನೆ ಸಲ್ಲಿಸುವುದು.<br>9. ಇದ್ದ ಹೆಸರುಗಳನ್ನು ಬದಲಿಸಿ ಹೊಸ ಹೆಸರನ್ನು ನಾಮಕರಣ ಮಾಡಲು ಹಾಗೂ ಹೆಚ್ಚುವರಿ ಹೆಸರು ನಾಮಕರಣ ಮಾಡುವ ಪ್ರಸ್ತಾವನೆಯನ್ನು ಸರ್ಕಾರದ ಪೂರ್ವಾನುಮತಿಯಿಲ್ಲದೆ ಬದಲಾಯಿಸತಕ್ಕದಲ್ಲ.<br><br>ಮೇಲ್ಕಂಡಂತೆ ರಸ್ತೆಗೆ ಹೆಸರು ಅಥವಾ ಯಾವುದಾದರೂ ಪ್ರತಿಮೆ ಸ್ಥಾಪಿಸಿದರೆ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವುದಿಲ್ಲವೆಂದು ಜಿಲ್ಲಾ ಪೋಲಿಸ್ ಅಧೀಕ್ಷಕರಿಂದ ವರದಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಪಡೆದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. |

ಸಂಖ್ಯೆ: ನಅಇ 99 ಜಿಎಲ್ 2023(ಇ)

(ರಹೀಂಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

Scanned with CamScanner

## ನಗರಸಭೆ ಮಂಡ್ಯ

### ಅನುಬಂಧ-1

### ಸರ್ಕಾರವು ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ರಸ್ತೆಗಳಿಗೆ ಅಧಿಕೃತವಾಗಿ ನಾಮಕರಣ ಮಾಡಿರುವ ಹೆಸರುಗಳು

| ಕ್ರ.ಸಂ | ಬಡಾವಣೆಯ ಹೆಸರು | ಅಧಿಕೃತವಾಗಿ ನಾಮಕರಣ ಮಾಡಿರುವ ರಸ್ತೆಗಳ ಹೆಸರು | |
|---|---|---|---|
| 1 | ಮಂಡ್ಯ ನಗರದಿಂದ ಅಂದರೆ ಇಂದಿರಾ ವೃತ್ತ (ಹೊಳಲು ವೃತ್ತ)ದಿಂದ ಶಿವಳ್ಳಿ ಕಡೆಗೆ ಹೋಗುವ ರಸ್ತೆಗೆ (ವಿ.ಸಿ. ಫಾರಂ ರಸ್ತೆ) | 1 | ಡಾ. ರಾಗಿ ಲಕ್ಷ್ಮಣಯ್ಯ ರಸ್ತೆ |
| 2 | ಮಂಡ್ಯ ನಗರದ ಬಿ.ಎಂ. ರಸ್ತೆಯಿಂದ ಬನ್ನೂರು ರಸ್ತೆಯನ್ನು ಸೇರುವ ರಸ್ತೆ (ಐ.ಬಿ. ಪಕ್ಕದ ರಸ್ತೆ) | 2 | ಕೆ.ವಿ. ಶಂಕರೇಗೌಡ ರಸ್ತೆ |
| 3 | ಬುದ್ಧ ಬಡಾವಣೆ | 3 | ಬುದ್ಧ ಬಡಾವಣೆಯ 1ನೇ ಅಡ್ಡ ರಸ್ತೆಗೆ ಶಾಂತಿ ಮಾರ್ಗ |
| | | 4 | ಬುದ್ಧ ಬಡಾವಣೆಯ 2ನೇ ಅಡ್ಡ ರಸ್ತೆಗೆ ಅಹಿಂಸಾ ಮಾರ್ಗ |
| | | 5 | ಬುದ್ಧ ಬಡಾವಣೆಯ 3ನೇ ಅಡ್ಡ ರಸ್ತೆಗೆ ಬುದ್ಧ ಮಾರ್ಗ |
| | | 6 | ಬುದ್ಧ ಬಡಾವಣೆಯ 4ನೇ ಅಡ್ಡ ರಸ್ತೆಗೆ ವಿನಯ ಮಾರ್ಗ |
| | | 7 | ಬುದ್ಧ ಬಡಾವಣೆಯ 5ನೇ ಅಡ್ಡ ರಸ್ತೆಗೆ ಟಿಪ್ಪು ಮಾರ್ಗ |
| 4 | ಮಂಡ್ಯ ನಗರಸಭೆ ವ್ಯಾಪ್ತಿಯ ಸೆಂಟ್ರಲ್ ರಸ್ತೆಗೆ | 8 | ಸಿ.ಬೋರೇಗೌಡರ ರಸ್ತೆ |
| 5 | ಮಂಡ್ಯ ನಗರದ ಗಾಂಧಿನಗರ 100 ಅಡಿ ರಸ್ತೆಯಿಂದ ಅಂದರೆ ಟಿ.ವಿ.ಎಸ್. ಷೋ ರೂಂ ಮತ್ತು ಹಳೇ ಷರೀಫ್ ಕ್ಲಿನಿಕ್ (ಆಝಾದ್ ಬಿಲ್ಡಿಂಗ್) ನಿಂದ ಶಂಕರನಗರಕ್ಕೆ ಹೋಗುವ ರಸ್ತೆಗೆ | 9 | ಶ್ರೀ ಮಹಮ್ಮದ್ ಜಫ್ರುಲ್ಲಾ ಖಾನ್ ರಸ್ತೆ |
| 6 | ಮಂಡ್ಯ ನಗರದ ಗಾಂಧಿನಗರದ ಮುಖ್ಯ ರಸ್ತೆ, ಕರ್ನಾಟಕ ಬಾರ್ ಸರ್ಕಲ್‌ನಿಂದ (ಗಾಂಧಿನಗರ ಪ್ರವೇಶಿಸುವ) ಕಿತ್ತೂರು ಚನ್ನಮ್ಮ ವೃತ್ತದವರೆಗೆ ರಸ್ತೆಗೆ) | 10 | ಶ್ರೀ ಶಿವ ಶರಣ ಮಡಿವಾಳ ಮಾಚಿ ದೇವ ರಸ್ತೆ |

### ಸರ್ಕಾರವು ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ವೃತ್ತಗಳಿಗೆ ಅಧಿಕೃತವಾಗಿ ನಾಮಕರಣ ಮಾಡಿರುವ ಹೆಸರುಗಳು

| | | | |
|---|---|---|---|
| 1 | ಮಂಡ್ಯ ನಗರ ನಗರಸಭೆ ವ್ಯಾಪ್ತಿಯ ವಿನೋಬಾ ರಸ್ತೆಯಿಂದ ಜೈಜವಾನ್ ಪೆಟ್ರೋಲ್ ಬಂಕ್ ವೃತ್ತದವರೆಗೆ | 1 | ಶ್ರೀ ಕನಕದಾಸ ವೃತ್ತ |
| 2 | ಹೊಸಹಳ್ಳಿ ವೃತ್ತಕ್ಕೆ | 2 | ಪಿ.ರುದ್ರಪ್ಪ ವೃತ್ತ |

Scanned with OKEN Scanner

# ನಗರಸಭೆ ಮಂಡ್ಯ

## ಅನುಬಂಧ-2

### ಸರ್ಕಾರದ ಅನುಮೋದನೆ ಇಲ್ಲದೆ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ವಿವಿಧ ರಸ್ತೆಗಳಿಗೆ ಅನಧಿಕೃತವಾಗಿ ನಾಮಕರಣ ಮಾಡಿ ನಾಮಫಲಕ ಅಳವಡಿಸಿರುವ ಹೆಸರುಗಳು

| ಕ್ರ ಸಂ. | ರಸ್ತೆಯಿರುವ ಪ್ರದೇಶ | ಅನಧಿಕೃತವಾಗಿ ನಾಮಕರಣ ಮಾಡಿರುವ ರಸ್ತೆಯ ಹೆಸರು | ಷರಾ |
|---|---|---|---|
| 1 | ಸ್ವರ್ಣಸಂದ್ರದ ಶನಿದೇವರ ದೇವಸ್ಥಾನದ ಹಿಂಭಾಗದ ರಸ್ತೆ | ಕೆಂಪೇಗೌಡ ರಸ್ತೆ | ದಿನಾಂಕ : 30-06-1987ರ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 32ರಲ್ಲಿ ಕೆಂಪೇಗೌಡ ರಸ್ತೆ ಎಂದು ನಾಮಕರಣ ಮಾಡಲು ತೀರ್ಮಾನವಾಗಿರುತ್ತದೆ ಆದರೆ ಸರ್ಕಾರದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ. |
| 2 | ಮಹಿಳಾ ಸಮಾಜ ರಸ್ತೆಗೆ | ತ್ರಿವೇಣಿ ರಸ್ತೆ | ದಿನಾಂಕ : 31-10-1995ರ ಆಡಳಿತಾಧಿಕಾರಿಗಳ ಸಭೆ, ವಿ.ಸಂ. 44ರಲ್ಲಿ ತ್ರಿವೇಣಿ ರಸ್ತೆ ಎಂದು ನಾಮಕರಣ ಮಾಡಲು ತೀರ್ಮಾನವಾಗಿರುತ್ತದೆ ಆದರೆ ಸರ್ಕಾರದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ. |
| 3 | ವಾರ್ಡ್ ನಂ 32ರ ಸ್ವರ್ಣಸಂದ್ರದ ಮಿತ್ರಕಲಾ ಸಂಘದ ಸ್ಟ್ಯಾಯಾಪೆಲೆ ಅಂಗಡಿ ಇರುವ ರಸ್ತೆಗೆ | ಬಿ.ಜಿ. ದಾಸೇಗೌಡ ರಸ್ತೆ | ದಿನಾಂಕ : 27-02-2002ರ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 10ರಲ್ಲಿ ಬಿ.ಜಿ. ದಾಸೇಗೌಡ ರಸ್ತೆ ಎಂದು ನಾಮಕರಣ ಮಾಡಲು ತೀರ್ಮಾನವಾಗಿರುತ್ತದೆ ಆದರೆ ಸರ್ಕಾರದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ. |
| 4 | ವಿ.ವಿ.ನಗರದ 19ನೇ ಕ್ರಾಸ್, ಕಲ್ಲಹಳ್ಳಿರಲ್ಲಿನ ರಸ್ತೆ | ಶ್ರೀಮಾನ್ ದಿ. ಕೆ.ಜಿ. ಲಿಂಗೇಗೌಡ ರಸ್ತೆ (ವಿ.ವಿ.ನಗರ 19ನೇ ಕ್ರಾಸ್) | ದಿನಾಂಕ : 26-07-2010ರ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 09ರಲ್ಲಿ ಶ್ರೀಮಾನ್ ದಿ. ಕೆ.ಜಿ. ಲಿಂಗೇಗೌಡ ರಸ್ತೆ ಎಂದು ನಾಮಕರಣ ಮಾಡಲು ತೀರ್ಮಾನವಾಗಿರುತ್ತದೆ ಆದರೆ ಸರ್ಕಾರದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ. |
| 5 | ಮಳವಳ್ಳಿಯಿಂದ ರಸ್ತೆಯಿಂದ – ಯತ್ತಗದಹಳ್ಳಿ ರಸ್ತೆಗೆ ಸಂಪರ್ಕಿಸುವ ರಸ್ತೆ | ಟಿ.ಎಲ್. ಪುರುಷೋತ್ತಮ್ ರಸ್ತೆ | ಈ ರಸ್ತೆಗಳಿಗೆ ಹೆಸರನ್ನು ಸಾರ್ವಜನಿಕರು ಬಹಳ ವರ್ಷಗಳಿಂದ ಈ ಹೆಸರುಗಳನ್ನು ಉಪಯೋಗಿಸುತ್ತಿರುತ್ತಾರೆ. |
| 6 | ವಿ.ವಿ.ನಗರದ 8ನೇ ಕ್ರಾಸ್, ಕಲ್ಲಹಳ್ಳಿರಲ್ಲಿನ ರಸ್ತೆ | ಶ್ರೀಮಾನ್ ಮಾದೇಗೌಡ ರಸ್ತೆ (ವಿ.ವಿ.ನಗರ 8ನೇ ಕ್ರಾಸ್) | |
| 7 | ವಿ.ವಿ.ನಗರದ 7ನೇ ಕ್ರಾಸ್, ಕಲ್ಲಹಳ್ಳಿರಲ್ಲಿನ ರಸ್ತೆ | ಶ್ರೀಮಾನ್ ಪಟೇಲ್ ಲಿಂಗೇಗೌಡ ರಸ್ತೆ (ವಿ.ವಿ.ನಗರ 7ನೇ ಕ್ರಾಸ್) | |
| 8 | ಪಿ. ರುದ್ರಪ್ಪ ವೃತ್ತದಿಂದ ಹೊಸಹಳ್ಳಿ ಬಿಸಿಲು ಮಾರಮ್ಮ ದೇವಸ್ಥಾನದ ದಿಕ್ಕಿಗೆ ಹೋಗುವ ರಸ್ತೆ | ಸದ್ಗುರು ಜ್ಞಾನಾ ನಂದ ರಸ್ತೆ | |
| 9 | ಬನ್ನೂರು ರಸ್ತೆಯಿಂದ ವಿದ್ಯಾನಗರದ ಕಡೆಗೆ ಸಾಯಿ ಎಲೆಕ್ಟ್ರಾನಿಕ್ಸ್ ಷೋ ರೂಂ ಪಕ್ಕದ ರಸ್ತೆ | ಲಾಲ್ ಬಹದ್ದೂರ್ ರಸ್ತೆ | |
| 10 | ಬಿ.ಎಂ. ರಸ್ತೆಯಿಂದ ಜಿಲ್ಲಾಧಿಕಾರಿಗಳ ವಸತಿಗೃಹದ ಕಡೆಗೆ ಹೋಗುವ ರಸ್ತೆ | ಸಾಹುಕಾರ್ ಎಸ್ ಚನ್ನಯ್ಯ ರಸ್ತೆ | |
| 11 | ಗಾಂಧಿನಗರ 13ನೇ ಕ್ರಾಸ್ ರಸ್ತೆ | ಪ್ರಶಾಂತ ಮಾರ್ಗ | |

| ಕ್ರ ಸಂ. | ರಸ್ತೆಯಿರುವ ಪ್ರದೇಶ | ಅನಧಿಕೃತವಾಗಿ ನಾಮಕರಣ ಮಾಡಿರುವ ರಸ್ತೆಯ ಹೆಸರು | ಷರಾ |
|---|---|---|---|
| ಸರ್ಕಾರದ ಅನುಮೋದನೆ ಇಲ್ಲದೆ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ವಿವಿಧ ವೃತ್ತಗಳಿಗೆ ಅನಧಿಕೃತವಾಗಿ ನಾಮಕರಣ ಮಾಡಿ ನಾಮಫಲಕ ಅಳವಡಿಸಿರುವ ಹೆಸರುಗಳು | | | |
| 1 | ಬನ್ನೂರು ರಸ್ತೆಗೆ ವಿನೋಬ ರಸ್ತೆ ಸೇರುವ ವೃತ್ತ | ಡಾ. ಬಿ.ಆರ್. ಅಂಬೇಡ್ಕರ್ ವೃತ್ತ (ವಾಟರ್ ಟ್ಯಾಂಕ್) | ದಿನಾಂಕ : 27-09-1984ರ ಸಾಮಾನ್ಯ ಸಭೆಯ ವಿ.ಸಂ. 213(ಅ)ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತ ಎಂದು ನಾಮಕರಣ ಮಾಡಲು ತೀರ್ಮಾನವಾಗಿರುತ್ತದೆ ಆದರೆ ಸರ್ಕಾರದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ. |
| 2 | ನಂದ ಚಿತ್ರಮಂದಿರದ ಎದುರು ಇರುವ ವೃತ್ತ | ಎಸ್.ಡಿ. ಜಯರಾಮ್ ವೃತ್ತ | ದಿನಾಂಕ : 09-05-2000 ವಿ.ಸಂ. 692ರಲ್ಲಿ ಎಸ್.ಡಿ. ಜಯರಾಮ್ ವೃತ್ತ ಎಂದು ನಾಮಕರಣ ಮಾಡಲು ತೀರ್ಮಾನವಾಗಿರುತ್ತದೆ ಆದರೆ ಸರ್ಕಾರದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ. |
| 3 | ವಿವೇಕಾ[illegible] ಮತ್ತು ಬನ್ನೂರು ರಸ್ತೆ ಸೇರುವ ವೃತ್ತಕ್ಕೆ | ಬೆಸಗರಹಳ್ಳಿ ರಾಮಣ್ಣ ವೃತ್ತ. | ದಿನಾಂಕ : 24-08-2010ರ ಸಾಮಾನ್ಯ ಸಭೆಯ ವಿ.ಸಂ. 36(30)ರಲ್ಲಿ ಬೆಸಗರಹಳ್ಳಿ ರಾಮಣ್ಣ ವೃತ್ತ, ಎಂದು ನಾಮಕರಣ ಮಾಡಲು ತೀರ್ಮಾನವಾಗಿರುತ್ತದೆ ಆದರೆ ಸರ್ಕಾರದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ. |
| 4 | ಹೊಸಹಳ್ಳಿ- ಕೆ.ಹೆಚ್.ಬಿ. ಬಡಾವಣೆ – ಕಾರಸವಾಡಿ ರಸ್ತೆಗಳ ವೃತ್ತ | ಶ್ರೀ ಬಸವೇಶ್ವರ ವೃತ್ತ | ದಿನಾಂಕ : 26-07-2010ರ ಸಾಮಾನ್ಯ ಸಭೆ, ವಿ.ಸಂ. 9ರಲ್ಲಿ ಶ್ರೀ ಬಸವೇಶ್ವರ ವೃತ್ತ ಎಂದು ನಾಮಕರಣ ಮಾಡಲು ತೀರ್ಮಾನವಾಗಿರುತ್ತದೆ ಆದರೆ ಸರ್ಕಾರದ ಅನುಮೋದನೆಯಾಗಿರುವುದು ಕಂಡು ಬಂದಿರುವುದಿಲ್ಲ. |
| 5 | ಕೆರೆಯ ಅಂಗಳದ ಕೆ.ಹೆಚ್.ಬಿ. ಬಡಾವಣೆಯ 80 ಅಡಿ ರಸ್ತೆ ಬಡಾವಣೆ ವೃತ್ತ | ಶ್ರೀ ಹೆಚ್.ಡಿ. ದೇವೇಗೌಡ ವೃತ್ತ | ದಿನಾಂಕ : 08-07-2022ರ ಸಭೆ, ವಿ.ಸಂ. 43ರಲ್ಲಿ ಶ್ರೀ ಹೆಚ್.ಡಿ. ದೇವೇಗೌಡ ವೃತ್ತ ಎಂದು ನಾಮಕರಣ ಮಾಡಲು ತೀರ್ಮಾನವಾಗಿದ್ದು ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ. |
| 6 | ನಗರಸಭೆ ಮುಂಭಾಗ, ಬೆಂಗಳೂರು ಮೈಸೂರು ರಸ್ತೆ | ಮಹಾವೀರ ವೃತ್ತ | ಈ ವೃತ್ತಗಳಿಗೆ ಸಾರ್ವಜನಿಕರು ಬಹಳ ವರ್ಷಗಳಿಂದ ಈ ಹೆಸರುಗಳನ್ನು ಉಪಯೋಗಿಸುತ್ತಿರುತ್ತಾರೆ. |
| 7 | ಪೇಟೆ ಬೀದಿ | ಕಾವೇರಿ ವೃತ್ತ | |
| 8 | ಹಾಲಹಳ್ಳಿ ಕೆರೆಯ ಸ್ಮಶಾನದ ಹತ್ತಿರ | ಹರಿಶ್ಚಂದ್ರ ಸರ್ಕಲ್ | |

Scanned with OKEN Sc

| ಕ್ರ ಸಂ. | ರಸ್ತೆಯಿರುವ ಪ್ರದೇಶ | ಅನಧಿಕೃತವಾಗಿ ನಾಮಕರಣ ಮಾಡಿರುವ ರಸ್ತೆಯ ಹೆಸರು | ಷರಾ |
|---|---|---|---|
| | ಸರ್ಕಾರದ ಅನುಮೋದನೆ ಇಲ್ಲದೆ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ವಿವಿಧ ವೃತ್ತಗಳಿಗೆ ಅನಧಿಕೃತವಾಗಿ ಪುತ್ಥಳಿಗಳನ್ನು ಸ್ಥಾಪಿಸಿರುವ ವಿವರ. | | |
| 1 | ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ ಪಿ. ರುದ್ರಪ್ಪ ವೃತ್ತ (ಹೊಸಹಳ್ಳಿ ವೃತ್ತ) | ದಿ. ಎಸ್.ಡಿ. ಜಯರಾಮ್, ಮಾಜಿ ಸಚಿವರು, ಪುತ್ಥಳಿಯನ್ನು ಅನಧಿಕೃತವಾಗಿ ಪ್ರತಿಷ್ಠಾಪಿಸಿರುತ್ತಾರೆ. | – |
| 2 | ಸಂಜಯ ಚಿತ್ರಮಂದಿರದ ಮುಂಭಾಗ ಇರುವ ವೃತ್ತದಲ್ಲಿ | ಡಾ. ರಾಜ್‌ಕುಮಾರ್, ಚಲನಚಿತ್ರ ಕಲಾವಿದರು, ರವರ ಪುತ್ಥಳಿಯನ್ನು ಅನಧಿಕೃತವಾಗಿ ಪ್ರತಿಷ್ಠಾಪಿಸಿರುತ್ತಾರೆ. | – |
| 3 | ಹೊಸಹಳ್ಳಿ ಬಿಸಿಲು ಮಾರಮ್ಮ ದೇವಸ್ಥಾನದ ಹತ್ತಿರ | ಸರ್. ಎಂ. ವಿಶ್ವೇಶ್ವರಯ್ಯ | – |

ಪೌರಾಯುಕ್ತರು,
ನಗರಸಭೆ, ಮಂಡ್ಯ.

## ನಗರಸಭೆ ಮಂಡ್ಯ

| ಅನುಬಂಧ–3 | | |
|---|---|---|
| ಸರ್ಕಾರ ಅಧಿಕೃತವಾಗಿ ಘೋಷಿಸಿರುವ ಹೆಸರುಗಳನ್ನು ಹೊರತುಪಡಿಸಿ, ಸಾರ್ವಜನಿಕವಾಗಿ ಹೆಸರು ತಪ್ಪಾಗಿ ಬಳಕೆಯಲ್ಲಿರುವ ವೃತ್ತ ಮತ್ತು ರಸ್ತೆಗಳು | | |
| ಕ್ರ ಸಂ. | ಅಧಿಕೃತವಾಗಿ ನಾಮಕರಣ ಮಾಡಿರುವ ರಸ್ತೆಗಳ ಹೆಸರು | ತಪ್ಪಾಗಿ ಬಳಕೆಯಲ್ಲಿರುವ ರಸ್ತೆಗಳ ಹೆಸರು |
| 1 | ಬುದ್ಧ ಬಡಾವಣೆಯ 1ನೇ ಅಡ್ಡ ರಸ್ತೆಗೆ ಶಾಂತಿ ಮಾರ್ಗ | ಬಿ.ವಿ.ಕೆ. ಲೇಔಟ್ 1ನೇ ಕ್ರಾಸ್ |
| 2 | ಬುದ್ಧ ಬಡಾವಣೆಯ 2ನೇ ಅಡ್ಡ ರಸ್ತೆಗೆ ಅಹಿಂಸಾ ಮಾರ್ಗ | ಬಿ.ವಿ.ಕೆ. ಲೇಔಟ್ 2ನೇ ಕ್ರಾಸ್ |
| 3 | ಬುದ್ಧ ಬಡಾವಣೆಯ 3ನೇ ಅಡ್ಡ ರಸ್ತೆಗೆ ಬುದ್ಧ ಮಾರ್ಗ | ಬಿ.ವಿ.ಕೆ. ಲೇಔಟ್ 3ನೇ ಕ್ರಾಸ್ |
| 4 | ಬುದ್ಧ ಬಡಾವಣೆಯ 4ನೇ ಅಡ್ಡ ರಸ್ತೆಗೆ ವಿನಯ ಮಾರ್ಗ | ಬಿ.ವಿ.ಕೆ. ಲೇಔಟ್ 4ನೇ ಕ್ರಾಸ್ |
| 5 | ಬುದ್ಧ ಬಡಾವಣೆಯ 5ನೇ ಅಡ್ಡ ರಸ್ತೆಗೆ ಟಿಪ್ಪು ಮಾರ್ಗ | ಬಿ.ವಿ.ಕೆ. ಲೇಔಟ್ 5ನೇ ಕ್ರಾಸ್ |
| 6 | ಮಹಮ್ಮದ್ ಜಫ್ರುಲ್ಲಾ ಖಾನ್ ರಸ್ತೆ | ಗಾಂಧಿನಗರ, ಸ್ಮಾರ್ಟ್ ಷಾಪ್ ರಸ್ತೆ (ರಿಲಯನ್ಸ್ ಫ್ರೆಶ್) |
| 7 | ಶ್ರೀ ಶಿವ ಶರಣ ಮಡಿವಾಳ ಮಾಚಿ ದೇವ ರಸ್ತೆ | ಕಿತ್ತೂರು ರಾಣಿ ಚನ್ನಮ್ಮ ವೃತ್ತಕ್ಕೆ ಹೋಗುವ ರಸ್ತೆ |
| 8 | ಸಿ.ಬೋರೇಗೌಡರ ರಸ್ತೆ | ಉಪ್ಪಿನಗಲ್ಲಿ |
| ಸರ್ಕಾರವು ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ವೃತ್ತಗಳಿಗೆ ತಪ್ಪಾಗಿ ಬಳಕೆಯಲ್ಲಿರುವ ಹೆಸರುಗಳು | | |
| | ಅಧಿಕೃತವಾಗಿ ನಾಮಕರಣ ಮಾಡಿರುವ ವೃತ್ತದ ಹೆಸರುಗಳು | ತಪ್ಪಾಗಿ ಬಳಕೆಯಲ್ಲಿರುವ ವೃತ್ತಗಳ ಹೆಸರು |
| 1 | ಪಿ. ರುದ್ರಪ್ಪ ವೃತ್ತ | ಹೊಸಹಳ್ಳಿ ವೃತ್ತ |
| 2 | ಶ್ರೀ ಕನಕದಾಸ ವೃತ್ತ | ಕುರುಬರ ಹಾಸ್ಟೆಲ್ ವೃತ್ತ |

ಪೌರಾಯುಕ್ತರು,
ನಗರಸಭೆ, ಮಂಡ್ಯ

Scanned with OKEN S

# ನಗರಸಭೆ ಮಂಡ್ಯ

## ಅನುಬಂಧ-4

**ಸರ್ಕಾರವು ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ವೃತ್ತಗಳಿಗೆ ಅಧಿಕೃತವಾಗಿ ಘೋಷಿಸಿ ಹೆಸರು ಮತ್ತು ನಾಮಫಲಕ ಅಳವಡಿಸಿರುವ ವಿವರ**

| ಕ್ರಸಂ | ಬಡಾವಣೆಯ ಹೆಸರು | | ವೃತ್ತಗಳ ಹೆಸರು | ಷರಾ |
|---|---|---|---|---|
| 1 | ಮಂಡ್ಯ ನಗರ ನಗರಸಭೆ ವ್ಯಾಪ್ತಿಯ ವಿನೋಬಾ ರಸ್ತೆಯಿಂದ ಜೈಜವಾನ್ ಪೆಟ್ರೋಲ್ ಬಂಕ್ ವೃತ್ತದವರೆಗೆ | 1 | ಶ್ರೀ ಕನಕದಾಸ ವೃತ್ತ | ನಾಮಫಲಕ ಅಳವಡಿಸಲಾಗಿರುತ್ತದೆ. |
| 2 | ಹೊಸಹಳ್ಳಿ ವೃತ್ತಕ್ಕೆ | 2 | ಪಿ.ರುದ್ರಪ್ಪ ವೃತ್ತ | ನಾಮಫಲಕ ಅಳವಡಿಸಲಾಗಿರುತ್ತದೆ. |

**ಸರ್ಕಾರವು ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ವೃತ್ತಗಳಿಗೆ ಅಧಿಕೃತವಾಗಿ ಘೋಷಿಸಿ ಹೆಸರು ಮತ್ತು ನಾಮಫಲಕ ಅಳವಡಿಸಿರುವ ವಿವರ**

| ಕ್ರಸಂ | ಬಡಾವಣೆಯ ಹೆಸರು | | ರಸ್ತೆಗಳ ಹೆಸರು | ಷರಾ |
|---|---|---|---|---|
| 1 | ಮಂಡ್ಯ ನಗರದ ಜಿ.ಎಂ. ರಸ್ತೆಯಿಂದ ಬನ್ನೂರು ರಸ್ತೆಯನ್ನು ಸೇರುವ ರಸ್ತೆ (ಐ.ಬಿ. ಪಕ್ಕದ ರಸ್ತೆ) | 1 | ಕೆ.ವಿ. ಶಂಕರೇಗೌಡ ರಸ್ತೆ | ನಾಮಫಲಕ ಅಳವಡಿಸಲಾಗಿರುತ್ತದೆ. |
| 2 | ಬುದ್ಧ ಬಡಾವಣೆ | 2 | ಬುದ್ಧ ಬಡಾವಣೆಯ 3ನೇ ಅಡ್ಡ ರಸ್ತೆಗೆ ಬುದ್ಧ ಮಾರ್ಗ | ನಾಮಫಲಕ ಅಳವಡಿಸಲಾಗಿರುತ್ತದೆ. |
| 3 | ಮಂಡ್ಯ ನಗರಸಭೆ ವ್ಯಾಪ್ತಿಯ ಸೆಂಟ್ರಲ್ ರಸ್ತೆಗೆ | 3 | ಸಿ.ಬೋರೇಗೌಡರ ರಸ್ತೆ | ನಾಮಫಲಕ ಅಳವಡಿಸಲಾಗಿರುತ್ತದೆ. |
| 4 | ಮಂಡ್ಯ ನಗರದ ಗಾಂಧಿನಗರದ ಮುಖ್ಯ ರಸ್ತೆ, ಕರ್ನಾಟಕ ಬಾರ್ ಸರ್ಕಲ್‌ನಿಂದ (ಗಾಂಧಿನಗರ ಪ್ರವೇಶಿಸುವ) ಕಿತ್ತೂರು ಚನ್ನಮ್ಮ ವೃತ್ತದವರೆಗೆ ರಸ್ತೆಗೆ) | 4 | ಶ್ರೀ ಶಿವ ಶರಣ ಮಡಿವಾಳ ಮಾಚಿ ದೇವ ರಸ್ತೆ | ನಾಮಫಲಕ ಅಳವಡಿಸಲಾಗಿರುತ್ತದೆ. |

**ಸರ್ಕಾರವು ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ರಸ್ತೆಗಳಿಗೆ ಅಧಿಕೃತವಾಗಿ ಘೋಷಿಸಿ ಹೆಸರು ಮತ್ತು ನಾಮಫಲಕ ಅಳವಡಿಸಬೇಕಾಗಿರುವ ರಸ್ತೆಗಳ ವಿವರ**

| | | | | |
|---|---|---|---|---|
| 1 | ಮಂಡ್ಯ ನಗರದಿಂದ ಅಂದರೆ ಇಂದಿರಾ ವೃತ್ತ (ಹೊಳಲು ವೃತ್ತ)ದಿಂದ ಶಿವಳ್ಳಿ ಕಡೆಗೆ ಹೋಗುವ ರಸ್ತೆಗೆ (ವಿ.ಸಿ. ಫಾರಂ ರಸ್ತೆ) | 1 | ಡಾ. ರಾಗಿ ಲಕ್ಷ್ಮಣಯ್ಯ ರಸ್ತೆ | ಶೀಘ್ರವಾಗಿ ನಾಮಫಲಕ ಅಳವಡಿಸಲು ಕ್ರಮವಹಿಸಲಾಗುವುದು. |

| | | | | |
|---|---|---|---|---|
| 2 | ಬುದ್ಧ ಬಡಾವಣೆ | 2 | ಬುದ್ಧ ಬಡಾವಣೆಯ 1ನೇ ಅಡ್ಡ ರಸ್ತೆಗೆ ಶಾಂತಿ ಮಾರ್ಗ | ಶೀಘ್ರವಾಗಿ ನಾಮಫಲಕ ಅಳವಡಿಸಲು ಕ್ರಮವಹಿಸಲಾಗುವುದು. |
| 3 | ಬುದ್ಧ ಬಡಾವಣೆ | 3 | ಬುದ್ಧ ಬಡಾವಣೆಯ 2ನೇ ಅಡ್ಡ ರಸ್ತೆಗೆ ಅಹಿಂಸಾ ಮಾರ್ಗ | ಶೀಘ್ರವಾಗಿ ನಾಮಫಲಕ ಅಳವಡಿಸಲು ಕ್ರಮವಹಿಸಲಾಗುವುದು. |
| 4 | ಬುದ್ಧ ಬಡಾವಣೆ | 4 | ಬುದ್ಧ ಬಡಾವಣೆಯ 4ನೇ ಅಡ್ಡ ರಸ್ತೆಗೆ ವಿನಯ ಮಾರ್ಗ | ಶೀಘ್ರವಾಗಿ ನಾಮಫಲಕ ಅಳವಡಿಸಲು ಕ್ರಮವಹಿಸಲಾಗುವುದು. |
| 5 | ಬುದ್ಧ ಬಡಾವಣೆ | 5 | ಬುದ್ಧ ಬಡಾವಣೆಯ 5ನೇ ಅಡ್ಡ ರಸ್ತೆಗೆ ಟಿಪ್ಪು ಮಾರ್ಗ | ಶೀಘ್ರವಾಗಿ ನಾಮಫಲಕ ಅಳವಡಿಸಲು ಕ್ರಮವಹಿಸಲಾಗುವುದು. |
| 6 | ಮಂಡ್ಯ ನಗರದ ಗಾಂಧಿನಗರ 100 ಅಡಿ ರಸ್ತೆಯಿಂದ ಅಂದರೆ ಟಿ.ವಿ.ಎಸ್. ಷೋ ರೂಂ ಮತ್ತು ಹಳೇ ಷರೀಫ್ ಕ್ಲಿನಿಕ್ (ಅರ್ಷಾದ್ ಬಿಲ್ಡಿಂಗ್) ನಿಂದ ಶಂಕರನಗರಕ್ಕೆ ಹೋಗುವ ರಸ್ತೆಗೆ | 6 | ಶ್ರೀ ಮಹಮ್ಮದ್ ಜಫ್ರುಲ್ಲಾ ಖಾನ್ ರಸ್ತೆ | ಶೀಘ್ರವಾಗಿ ನಾಮಫಲಕ ಅಳವಡಿಸಲು ಕ್ರಮವಹಿಸಲಾಗುವುದು. |

ಪೌರಾಯುಕ್ತರು,
ನಗರಸಭೆ, ಮಂಡ್ಯ

Scanned with OKEN Scanner

# ಕರ್ನಾಟಕ ಸರ್ಕಾರ

ಕ್ರಮಾಂಕ:ಪೌನಿ:ಕೇಂಸ:ಎಸ್‌ಎನ್‌ಎಸ್:5:87-88.

ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು, ದಿನಾಂಕ:28-10-1987.

## :: ಸುತ್ತೋಲೆ ::

ಈ ಮೂಲಕ ಈ ನಿರ್ದೇಶನಾಲಯದ ಅಧಿಕಾರಕ್ಕೆ ಒಳಪಟ್ಟ ನಗರಸಭೆ ಹಾಗೂ ಪುರಸಭೆಗಳ ಆಯುಕ್ತರು ಮತ್ತು ಮುಖ್ಯಾಧಿಕಾರಿಗಳ ಗಮನಕ್ಕೆ ತಿಳಿಸುವುದೇನೆಂದರೆ ನಗರ : ಪುರಸಭೆಗಳು ನಗರ : ಪುರಸಭೆ ವ್ಯಾಪ್ತಿಯಲ್ಲಿರುವ ಸ್ಥಳ/ರಸ್ತೆಗಳಿಗೆ ಹೊಸದಾಗಿ ಮುಖಂಡರ ಹೆಸರನ್ನು ಇಡಲು ಹಾಗೂ ಚರಿತ್ರಾರ್ಹ ವ್ಯಕ್ತಿಗಳ ಪ್ರತಿಮೆ ಸ್ಥಾಪಿಸಲು 1964ರ ಪುರಸಭೆ ಕಾಯ್ದೆ 211 (1) ರ ನಿಯಮದ ಪ್ರಕಾರ ಪ್ರಸ್ತಾವನೆಯನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಈ ಬಗ್ಗೆ ಪ್ರಸ್ತಾವನೆಗಳನ್ನು ಕಳುಹಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಿ ಎಲ್ಲಾ ಮಾಹಿತಿಗಳೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಲು ಸೂಚಿಸಲಾಗಿದೆ.

1) ನಗರಸಭೆ : ಪುರಸಭೆಯು ತನ್ನ ಅಧಿವೇಶನದಲ್ಲಿ ಠರಾವು ಮಾಡಿದ ಪ್ರಸ್ತಾವನೆಯನ್ನು ಸಾರ್ವಜನಿಕರ ಗಮನಕ್ಕೆ ಸ್ಥಳೀಯ ಪತ್ರಿಕೆಗಳ ಮುಖಾಂತರ ಪ್ರಚುರ ಪಡಿಸುವುದು. ಹಾಗೂ ಈ ಬಗ್ಗೆ ಪುರಸಭೆ : ನಗರಸಭೆ ಹಾಗೂ ತಹಸೀಲ್ದಾರ್ : ಜಿಲ್ಲಾಧಿಕಾರಿಗಳ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಸಾರ್ವಜನಿಕರ ಗಮನಕ್ಕೆ ಬರುವಂತೆ ಪ್ರಕಟಿಸುವುದು. ಅನಂತರ ಪ್ರಚುರ ಪಡಿಸಿದ ಬಗ್ಗೆ ಪಂಚನಾಮೆ ಮಾಡಿಸಿ ಈ ಬಗ್ಗೆ ಸಾರ್ವಜನಿಕರಿಂದ ಬರಬಹುದಾದ ಸಲಹೆ ಮತ್ತು ಆಕ್ಷೇಪಣೆಗಳಿಗೆ 30 ದಿನಗಳ ಕಾಲಾವಕಾಶ ಕೊಡತಕ್ಕದ್ದು. ಹಾಗೂ ಸಾರ್ವಜನಿಕರಿಂದ ಬಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಸಂಬಂಧಿಸಿದ ನಗರ ಹಾಗೂ ಪುರಸಭೆಗಳ ಗಮನಕ್ಕೆ ತಂದು ಪುನಃ ಠರಾವು ಮಾಡಿಸುವುದು.

2) ಹೀಗೆ ಠರಾವು ಮಾಡಿದ ಪ್ರಸ್ತಾವನೆಯ ಪ್ರಕಾರ ರಸ್ತೆಗೆ ಹೆಸರು ಇಟ್ಟರೆ ಅಥವಾ ಯಾವುದಾದರೂ ಪ್ರತಿಮೆ ಸ್ಥಾಪಿಸಿದರೆ ಅದರಿಂದ ಯಾವ ರೀತಿಯ ಗಲಭೆ ಆಗುವ ಸಾಧ್ಯತೆ ಇಲ್ಲ ಎಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವರದಿ ಪತ್ರ ಪಡೆದ ನಂತರ ಪ್ರಸ್ತಾವನೆಯನ್ನು ಈ ನಿರ್ದೇಶನಾಲಯಕ್ಕೆ ಮಂಜೂರಾತಿಗೆ ಕಳುಹಿಸುವುದು.

ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕಳುಹಿಸಿದ ಪ್ರಸ್ತಾವನೆಗಳನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಯಾವುದಾದರೂ ಕಾರಣಕ್ಕೆ [illegible] ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿ ಪ್ರಸ್ತಾವನೆಗಳನ್ನು ಕಳುಹಿಸುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮಕ್ಕೆ ಗುರಿಪಡಿಸಲಾಗುವುದು.

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.

ಪ್ರತಿ :
1) ವಿಭಾಗಾಧಿಕಾರಿಗಳು, ಮೈಸೂರು, ಬೆಂಗಳೂರು, ಬೆಳಗಾಂ ಮತ್ತು ಗುಲ್ಬರ್ಗಾ ಇವರ ಮಾಹಿತಿಗಾಗಿ ಒಪ್ಪಿಸಿರುತ್ತೆ.
2) ಪ್ರತಿ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
3) ಆಯುಕ್ತರು ಮತ್ತು ಮುಖ್ಯಾಧಿಕಾರಿ, ನಗರಸಭೆ : ಪುರಸಭೆ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
4) ಪೌರಾಡಳಿತ ನಿರ್ದೇಶನಾಲಯದ ಎಲ್ಲಾ ವಿಭಾಗದ ಅಧಿಕಾರಿಗಳ ಮಾಹಿತಿಗಾಗಿ.

ALS. ಎಸ್‌ವಿಎಲ್2810

G. 938
2/11/87

**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 281 ಜಿಇಎಲ್ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 23.12.2016.

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ವಿ.ವಿ.ಗೋಪುರ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಛೇರಿ
ಮಂಡ್ಯ ಜಿಲ್ಲೆ, ಮಂಡ್ಯ.
03 JAN 2017

ವಿಷಯ: ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿರುವ ರಸ್ತೆ / ವೃತ್ತಗಳಿಗೆ ನಾಮಕರಣ ಮಾಡುವ ಬಗ್ಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಕಛೇರಿಯ ಪತ್ರ ಸಂಖ್ಯೆ: 16338 ಡಿಎಂಎ 8 ಸಿಜಿಪಿಎಸ್ 2016-17, ದಿನಾಂಕ 29.07.2016.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದೊಡನೆ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 211ರಲ್ಲಿ ಪ್ರದತ್ತವಾದ ಅಧಿಕಾರದನ್ವಯ, ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ರಸ್ತೆ / ವೃತ್ತಕ್ಕೆ ನಾಮಕರಣ ಮಾಡುವ ಪ್ರಸ್ತಾವನೆಗೆ, ಸರ್ಕಾರವು ಅನುಮೋದನೆ ನೀಡಿರುತ್ತದೆಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

(1) ಮಂಡ್ಯ ನಗರಸಭೆ ವ್ಯಾಪ್ತಿಯ ವಿನೋಬಾ ರಸ್ತೆಯಿಂದ ಜೈ ಜವಾನ್ ಪೆಟ್ರೋಲ್ ಬಂಕ್ ವೃತ್ತದವರೆಗೆ **"ಶ್ರೀ ಕನಕದಾಸ ವೃತ್ತ"**

(2) ಮಂಡ್ಯ ನಗರಸಭೆ ವ್ಯಾಪ್ತಿಯ ಸೆಂಟ್ರಲ್ ರಸ್ತೆಗೆ **"ಸಿ.ಬೋರೇಗೌಡರ ರಸ್ತೆ"**

ತಮ್ಮ ವಿಶ್ವಾಸಿ,

23/12/2016

(ಈ. ಶಿವರುದ್ರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಎಂ.ಎ-2)

DUDC 3/1/17

864

19/01/17

ಪ್ರತಿ:
ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ – ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

Scanned with AnyScanner

ಆಯುಕ್ತರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@yahoo.co.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001

ಸಂಖ್ಯೆ:ಪೌನಿ/ಜಿಪಿಎಸ್/ಪ್ರತಿಮೆ/ನಾಮ/ಸಿಆರ್/ /2012-13. ದಿನಾಂಕ: 17\12\2012

:: ಸುತ್ತೋಲೆ ::

ವಿಷಯ: ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಗಣ್ಯ ವ್ಯಕ್ತಿಗಳ ಪ್ರತಿಮೆ ಸ್ಥಾಪನೆ, ಹಾಗೂ ಬೀದಿ ರಸ್ತೆ, ಅಡ್ಡ ರಸ್ತೆ, ವೃತ್ತ ಮತ್ತು ಬಡಾವಣೆಗಳಿಗೆ ಹೆಸರುಗಳನ್ನಿಡುವ ಬಗ್ಗೆ ಅಥವಾ ಮರು ನಾಮಕರಣ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂ.ವನಇ 57 ಟಿಎಂಟಿ 93(ಭಾಗ) ದಿನಾಂಕ.4.2.1995.
2. ಸರ್ಕಾರದ ಸುತ್ತೋಲೆ ಸಂ.ಕಸಂಮಪ್ರ/564/ಕಸಧ/2012. ದಿನಾಂಕ.11.6.2012.

===

ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಚರಿತ್ರಾರ್ಹ ವ್ಯಕ್ತಿಗಳ ಪ್ರತಿಮೆ ಸ್ಥಾಪಿಸಲು ಹಾಗೂ ಕೆಲವು ರಸ್ತೆಗಳಿಗೆ ಹೆಸರಾಂತ ಸಂತರು, ಶರಣರು, ಸ್ವಾತಂತ್ರ್ಯ ಹೋರಾಟಗಾರರು, ಗಣ್ಯ ವ್ಯಕ್ತಿಗಳು ಮುಂತಾದವರು ದೇಶಕ್ಕಾಗಿ ಸಲ್ಲಿಸಿದ ಸೇವೆ ತ್ಯಾಗ ಮನೋಭಾವಗಳನ್ನು ಸ್ಮರಿಸುವ ಉದ್ದೇಶದಿಂದ ಕರ್ನಾಟಕ ಪುರಸಭೆಗಳ 1964ರ ಕಾಯ್ದೆ 211(1)ರ ಪ್ರಕಾರ ಪ್ರಸ್ತಾವನೆಯನ್ನು ಪೌರಾಯುಕ್ತರು/ ಮುಖ್ಯಾಧಿಕಾರಿಗಳು ಆಯಾ ಜಿಲ್ಲಾಧಿಕಾರಿಗಳ ಮುಖಾಂತರ ಕಳುಹಿಸಲಾಗುತ್ತಿದೆ. ಈಗಾಗಲೇ ಉಲ್ಲೇಖ (1) ಮತ್ತು (2)ರಲ್ಲಿ ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿರುವಂತೆ ಪ್ರಸ್ತಾವನೆ ಸಲ್ಲಿಸದೇ ಇರುವುದು ಕಂಡುಬರುತ್ತದೆ. ಇದರಿಂದ ಇಂತಹ ಪ್ರತಿಮೆಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದು ವಿರೂಪಗೊಂಡಿರುವುದು ಹಾಗೂ ಇನ್ನಿತರ ಅಹಿತಕರ ಘಟನೆಗಳು ಸಂಭವಿಸುವುದರಿಂದ ಅಶಾಂತತೆಗೆ ಭಂಗ ಉಂಟಾಗುತ್ತಿರುವುದು ತಿಳಿದುಬರುತ್ತದೆ. ಈ ಬಗ್ಗೆ ಪ್ರತಿಮೆಗಳ ಸ್ಥಾಪನೆಗೆ ಸ್ಪಷ್ಟವಾದ ಮಾರ್ಗಸೂಚಿಗಳಿಲ್ಲದಿರುವುದನ್ನು ಮನಗಂಡು ಯಾವುದೆ ಸರ್ಕಾರಿ ಜಾಗದಲ್ಲಿ ಗಣ್ಯ ವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪನೆ ಮಾಡುವುದು ಸೂಕ್ತವಲ್ಲವೆಂದು ಪರಿಗಣಿಸಿ ಗಣ್ಯ ವ್ಯಕ್ತಿಗಳ ಪ್ರತಿಮೆಗಳ ಸ್ಥಾಪನೆಗೆ ಸಂಬಂಧಿಸಿದಂತೆ ಹಾಗೂ ಬೀದಿ ರಸ್ತೆ, ವೃತ್ತ ಮುಂತಾದವುಗಳಿಗೆ ಸರ್ಕಾರವು ಈ ಕೆಳಗಿನ ಮಾರ್ಗಸೂಚಿಗಳನ್ನು ಹೊರಡಿಸಿದೆ.

1. ಸರ್ಕಾರದ/ಸಾರ್ವಜನಿಕ, ಜಾಗದಲ್ಲಿ ಯಾವುದೇ ಸಂತರ/ಶರಣರ, ಜನ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪಿಸುವುದನ್ನು ನಿರ್ಭಂಧಿಸಿದೆ.
2. ಪ್ರತಿಮೆ ಸ್ಥಾಪಿಸುವುದಕ್ಕೆ ಸಂಘ ಸಂಸ್ಥೆಗಳು ಮುಂದೆ ಬಂದಲ್ಲಿ ಪ್ರಾಥಮಿಕವಾಗಿ ಅಂತಹ ಸಂಘ ಸಂಸ್ಥೆಗಳು ತಮಗೆ ಸೇರಿದ ನಿವೇಶನದಲ್ಲಿ ಪ್ರತಿಮೆಯನ್ನು ನಿರ್ಮಿಸುವ ಹಾಗೂ ಅವುಗಳ ಭದ್ರತೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಮುಚ್ಚಳಿಕೆ ನೀಡತಕ್ಕದ್ದು.
3. ಮಂಜೂರಾತಿ ಪಡೆದು ಸ್ಥಾಪಿಸಲಾದ ಪ್ರತಿಮೆಗಳ ನಿರ್ವಹಣೆಯನ್ನು ಆಯಾ ಸಂಘ ಸಂಸ್ಥೆಗಳೇ ನಿರ್ವಹಿಸತಕ್ಕದ್ದು.
4. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಕೌನ್ಸಿಲ್ ಅಧಿವೇಶನದಲ್ಲಿ ಠರಾವು ಮಾಡಿದ ಪ್ರಸ್ತಾವನೆಯನ್ನು ಸಾರ್ವಜನಿಕರ ಗಮನಕ್ಕೆ ಸ್ಥಳೀಯ ಪತ್ರಿಕೆಗಳ ಮುಖಾಂತರ ಪ್ರಚುರ ಪಡಿಸುವುದು.

5. ಈ ಬಗ್ಗೆ ನಗರ ಸ್ಥಳೀಯ ಸಂಸ್ಥೆಯು ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿಯ ನೋಟಿಸ್ ಬೋರ್ಡ್‌ನಲ್ಲಿ ಸಾರ್ವಜನಿಕ ಗಮನಕ್ಕೆ ಬರುವಂತೆ ಪ್ರಕಟಣೆ ವಹಿಸುವುದು.
6. ಆನಂತರ ಪ್ರಚುರ ಪಡಿಸಿದ ಬಗ್ಗೆ ಪಂಚನಾಮೆ ಮಾಡಿಸಿ ಈ ಬಗ್ಗೆ ಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆಗಳಿಗೆ 30 ದಿನಗಳ ಕಾಲಾವಕಾಶ ಕೊಡುವುದು.
7. ಹಾಗೂ ಸಾರ್ವಜನಿಕರಿಂದ ಬಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಸಂಬಂಧಿಸಿದ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಯು ಗಮನಕ್ಕೆ ತಂದು ಪುನ: ಠರಾವು ಪಾಸು ಮಾಡಿಸುವುದು.
8. ಹೀಗೆ ಠರಾವು ಮಾಡಿದ ವಿಷಯದ ಬಗ್ಗೆ ರಸ್ತೆಗೆ ಹೆಸರು ಇಟ್ಟರೆ ಅಥವಾ ಯಾವುದಾದರೂ ಪ್ರತಿಮೆ ಸ್ಥಾಪಿಸಿದರೆ ಅದರಿಂದ ಯಾವ ರೀತಿಯ ಗಲಭೆ ಆಗುವ ಸಾಧ್ಯತೆ ಇಲ್ಲ ಎಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವರದಿ ಪಡೆದು ಪ್ರಸ್ತಾವನೆ ಸಲ್ಲಿಸುವುದು.
9. ಇದ್ದ ಹೆಸರುಗಳನ್ನು ಬದಲಿಸಿ ಹೊಸ ಹೆಸರನ್ನು ನಾಮಕರಣ ಮಾಡಲು ಹಾಗೂ ಹೆಚ್ಚುವರಿ ಹೆಸರು ನಾಮಕರಣ ಮಾಡುವ ಪ್ರಸ್ತಾವನೆಯನ್ನು ಸರ್ಕಾರದ ಪೂರ್ವಾನುಮತಿಯಿಲ್ಲದೇ ಬದಲಾಯಿಸತಕ್ಕದ್ದಲ್ಲ.

ಆದ್ದರಿಂದ ಇನ್ನು ಮುಂದೆ ಪೌರಾಯುಕ್ತರು/ಮುಖ್ಯಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸುವ ಮುನ್ನ ಈ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕಳುಹಿಸಿದ ಪ್ರಸ್ತಾವನೆಗಳಿಗೆ ಮಾತ್ರ ಗಮನ ಕೊಡಲಾಗುವುದು. ಈ ಬಗ್ಗೆ ಯಾವುದೇ ಕಾರಣಕ್ಕೂ ಈ ಮೇಲಿನಂತೆ ತಿಳಿಸಿರುವ ಸೂಚನೆಗಳನ್ನು ಗಮನಿಸದೇ ಪ್ರಸ್ತಾವನೆಗಳನ್ನು ಕಳುಹಿಸುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗವುದು. ಹಾಗೂ ಸದರಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಸ್ಪಷ್ಟವಾದ ಅಭಿಪ್ರಾಯದೊಂದಿಗೆ ಸಲ್ಲಿಸುವುದು.

ಆಯುಕ್ತರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಗಳನ್ನು:

1. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
2. ರಾಜ್ಯದ ಎಲ್ಲಾ ಜಿಲ್ಲೆಯ ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕರು.
3. ರಾಜ್ಯದ ಎಲ್ಲಾ ಜಿಲ್ಲೆಯ ನಗರಸಭೆ/ಪುಸಭೆ/ಪಟ್ಟಣ ಪಂಚಾಯಿತಿಯ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಗೆ.
4. ಕಛೇರಿ ಪ್ರತಿ.

ಆಯುಕ್ತರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ಸಂಖ್ಯೆ:ಪೌನಿ:ರನಾ:ಸಿಆರ್:24:2010-11 ದಿನಾಂಕ: 13/2/2012

ಇವರಿಗೆ,

ಜಿಲ್ಲಾಧಿಕಾರಿಗಳು,
ಮಂಡ್ಯ ಜಿಲ್ಲೆ,
ಮಂಡ್ಯ.

ಮಾನ್ಯರೆ,

ವಿಷಯ: ಮಂಡ್ಯ ನಗರದ ಬಿ.ವಿ.ಕೆ.ಲೇಔಟ್‌ಗೆ ಬುದ್ಧ ಬಡಾವಣೆ ಎಂದು ಹಾಗೂ ಅಡ್ಡ ರಸ್ತೆಗಳಿಗೆ ನಾಮಕರಣ ಮಾಡುವ ಬಗ್ಗೆ.

ಉಲ್ಲೇಖ: 1.ತಮ್ಮ ಪತ್ರದ ಸಂ:ಮುನಿಸಿ(2)ಸಿಆರ್:565(1):2007-08 ದಿ:3.2.2011
2.ಸರ್ಕಾರದ ಪತ್ರದ ಸಂಖ್ಯೆ:ನಅಇ 176 ಜಿಇಎಲ್ 2011 ದಿ:2.2.2012

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ತಮ್ಮ ಪ್ರಸ್ತಾವನೆಯನ್ನು ಪರಿಶೀಲಿಸಿ, ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಮಂಡ್ಯ ನಗರಸಭೆ ವ್ಯಾಪ್ತಿಯ ಬಿ. ವಿ.ಕೆ. ಲೇಔಟ್‌ಗೆ ಬುದ್ಧ ಬಡಾವಣೆ ಎಂದು ಹಾಗೂ ಅಡ್ಡ ರಸ್ತೆಗಳಿಗೆ ಈ ಕೆಳಕಂಡಂತೆ ನಾಮಕರಣ ಮಾಡಲು ಕರ್ನಾಟಕ ಪುರಸಭೆಗಳ ಕಾಯ್ದೆ 1964 ರ ಕಲಂ 211 ರಂತೆ ಅನುಮತಿಯನ್ನು ನೀಡಿದ್ದು, ಅದರಂತೆ ಕ್ರಮ ಕೈಗೊಳ್ಳಲು ಕೋರಿ ಉಲ್ಲೇಖ (2) ರ ಸರ್ಕಾರದ ಪತ್ರವನ್ನು ಈ ಪತ್ರಕ್ಕೆ ಲಗತ್ತಿಸಿ ಕಳುಹಿಸಿದೆ.

1. 1ನೇ ಅಡ್ಡ ರಸ್ತೆಗೆ ಶಾಂತಿಮಾರ್ಗ
2. 2ನೇ ಅಡ್ಡ ರಸ್ತೆಗೆ ಅಹಿಂಸಾ ಮಾರ್ಗ
3. 3ನೇ ಅಡ್ಡ ರಸ್ತೆಗೆ ಬುದ್ಧ ಮಾರ್ಗ
4. 4ನೇ ಅಡ್ಡ ರಸ್ತೆಗೆ ವಿನಯ ಮಾರ್ಗ
5. 5ನೇ ಅಡ್ಡ ರಸ್ತೆಗೆ ಟಿಪ್ಪು ಮಾರ್ಗ

ತಮ್ಮ ವಿಶ್ವಾಸಿ,

ಆಯುಕ್ತರ ಪರವಾಗಿ,
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.

ಪ್ರತಿಯನ್ನು: ಪೌರಾಯುಕ್ತರು, ನಗರಸಭೆ, ಮಂಡ್ಯರವರಿಗೆ ಮಾಹಿತಿಗಾಗಿ

Scanned with AnyScanner

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 176 ಜಿಪಎಲ್ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:02-02-2012.

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
1852 ಆಯುಕ್ತರು,
ಪೌರಾಡಳಿತ ನಿರ್ದೇಶನಾಲಯ,
ವಿ.ವಿ.ಗೋಪುರ, ಬೆಂಗಳೂರು.

...ectorate of Municipal Admn.
No...............
Compilation...............
07 FEB 2012
DMA A...............
D.M.A...............

ಮಾನ್ಯರೇ,

ವಿಷಯ:- ಮಂಡ್ಯ ನಗರದ ವಿ.ವಿ.ಕೆ. ಲೇಔಟ್‌ಗೆ "ಬುದ್ಧ ಬಡಾವಣೆ" ಎಂದು ಹಾಗೂ ಅಡ್ಡ ರಸ್ತೆಗಳಿಗೆ ನಾಮಕರಣ ಮಾಡುವ ಬಗ್ಗೆ.

ಉಲ್ಲೇಖ:-
1) ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಪತ್ರ ಸಂಖ್ಯೆ: ಮುನಿಸಿ(2)/ಸಿಆರ್/565(1)/2007-08,ದಿನಾಂಕ 03.02.2011.
2) ಪೌರಾಡಳಿತ ನಿರ್ದೇಶನಾಲಯ ಬೆಂಗಳೂರುರವರ ಪತ್ರ ಸಂಖ್ಯೆ: ಪೌನಿ/ಇತರೆ/ಸಿಆರ್/24/2010-11, ದಿನಾಂಕ 22.03.2011.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ಮತ್ತು (2)ರ ಪತ್ರಗಳ ಮೂಲಕ ಸಲ್ಲಿಸಲಾದ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿರುವ ವಿ.ವಿ.ಕೆ. ಲೇಔಟ್‌ಗೆ "ಬುದ್ಧ ಬಡಾವಣೆ" ಎಂದು ಹಾಗೂ ಈ ಕೆಳಕಂಡ ಅಡ್ಡರಸ್ತೆಗಳಿಗೆ ಅವುಗಳ ಮುಂದೆ ಸೂಚಿಸಲಾದ ಹೆಸರುಗಳನ್ನು ನಾಮಕರಣ ಮಾಡಲು ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ 211(1)ರಡಿಯಲ್ಲಿ ಸರ್ಕಾರವು ಅನುಮತಿ ನೀಡಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

| | | |
|---|---|---|
| 1. | 1ನೇ ಅಡ್ಡ ರಸ್ತೆ | ಶಾಂತಿ ಮಾರ್ಗ |
| 2. | 2ನೇ ಅಡ್ಡ ರಸ್ತೆ | ಅಹಿಂಸಾ ಮಾರ್ಗ |
| 3. | 3ನೇ ಅಡ್ಡ ರಸ್ತೆ | ಬುದ್ಧ ಮಾರ್ಗ |
| 4. | 4ನೇ ಅಡ್ಡ ರಸ್ತೆ | ವಿನಯ ಮಾರ್ಗ |
| 5. | 5ನೇ ಅಡ್ಡ ರಸ್ತೆ | ಬಾಪು ಮಾರ್ಗ |

ತಮ್ಮ ನಂಬುಗೆಯ,

B Babu

(ಬಿ. ರಮೇಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

Scanned with AnyScanner

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:— ನಗರಸಭೆ ಮಂಡ್ಯ - ರಾಗಿತಳಿ ಅಭಿವೃದ್ಧಿ ಪಡಿಸಿದ ವಿಜ್ಞಾನಿ ಶ್ರೀ ಲಕ್ಷ್ಮಣಯ್ಯನವರ ಹೆಸರನ್ನು ಮಂಡ್ಯ ನಗರದಿಂದ ಶಿವಹಳ್ಳಿಗೆ ಹೋಗುವ ರಸ್ತೆಗೆ ಡಾ: ರಾಗಿಲಕ್ಷ್ಮಣಯ್ಯ ರಸ್ತೆ ಎಂದು ನಾಮಕರಣ ಮಾಡಲು ಸರ್ಕಾರದ ಮಂಜೂರಾತಿ ಕುರಿತಂತೆ.

ಓದಲಾಗಿದೆ:— ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆರವರ ಪತ್ರ ಸಂಖ್ಯೆ: ಮುನಿಸಿ(1): ಸಿಆರ್:193:98-99, ದಿನಾಂಕ:17-11-98.

—○—

ಪ್ರಸ್ತಾವನೆ:—

ಮೇಲೆ ಓದಲಾದ ಪತ್ರದಲ್ಲಿ ದಿನಾಂಕ:20-1-98ರ ನಗರಸಭೆ ಕೌನ್ಸಿಲ್ ನಿರ್ಣಯದಂತೆ ಪ್ರಾಂಶುಪಾಲರು ಕೃಷಿ ವಿಶ್ವವಿದ್ಯಾನಿಲಯ ವಿ.ಸಿ. ಫಾರಂ, ಮಂಡ್ಯ ಇವರ ಕೋರಿಕೆಯಂತೆ ರಾಗಿ ತಳಿ ಅಭಿವೃದ್ಧಿ ಪಡಿಸಿದ ವಿಜ್ಞಾನಿ ಡಾ: ಲಕ್ಷ್ಮಣಯ್ಯ ಇವರ ಹೆಸರನ್ನು ಮಂಡ್ಯ ನಗರದ ಹೊಳಲು ವೃತ್ತದಿಂದ ಶಿವಹಳ್ಳಿ ಕಡೆಗೆ ಹೋಗುವ ರಸ್ತೆಗೆ ಡಾ: ರಾಗಿ ಲಕ್ಷ್ಮಣಯ್ಯ ಎಂದು ನಾಮಕರಣ ಮಾಡಲು ಸಭೆ ಸರ್ವಾನುಮತದಿಂದ ನಿರ್ಣಯಿಸಿದ್ದು ಮೇರೆಗೆ ಸಾರ್ವಜನಿಕರ ಆಕ್ಷೇಪಣೆ ಕೋರಿ ನಿಯಮ 39ರ ಪ್ರಕಾರ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಆದರೆ ಯಾವುದೇ ಆಕ್ಷೇಪಣೆಗಳು ಬಂದಿಲ್ಲವೆಂದು ಸರ್ಕಾರಕ್ಕೆ ವರದಿ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 05 ಜಿಇಎಲ್ 99, ಬೆಂಗಳೂರು, ದಿನಾಂಕ:24-6-1999.

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಮಂಡ್ಯ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಮಂಡ್ಯ ನಗರದಿಂದ ಅಂದರೆ ಇಂದಿರಾ ವೃತ್ತ(ಹೊಳಲು ವೃತ್ತ)ದಿಂದ ಶಿವಹಳ್ಳಿ ಕಡೆಗೆ ಹೋಗುವ ರಸ್ತೆಗೆ( ವಿ.ಸಿ. ಫಾರಂ ರಸ್ತೆ) "ಡಾ: ರಾಗಿಲಕ್ಷ್ಮಣಯ್ಯ ರಸ್ತೆ ಎಂದು" ನಾಮಕರಣ ಮಾಡಲು ಸಭೆಯು ಒಪ್ಪಿ ತೀರ್ಮಾನಿಸಿದನ್ವಯ ಸರ್ಕಾರವು ಕರ್ನಾಟಕ ಪುರಸಭೆ ಕಾಯಿದೆ 1964ರ ಕಲಂ 211(1) ರನ್ವಯ ಸರ್ಕಾರದ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಎ. ಸತ್ಯನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪ್ರತಿ:—

1) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು
2) ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ,
3) ಪೌರಾಯುಕ್ತರು ನಗರಸಭೆ ಮಂಡ್ಯ,
4) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

ಮಾಹಿತಿಗಾಗಿ:—

1) ಮಾನ್ಯ ಪೌರಾಡಳಿತ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು,
2) ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ/ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು ನಗರಾಭಿವೃದ್ಧಿ ಇಲಾಖೆ.

Scanned with AnyScanner

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:— ನಗರಸಭೆ ಮಂಡ್ಯ 'ರಾಗಿತಳಿ ಅಭಿವೃದ್ಧಿ ಪಡಿಸಿದ ವಿಜ್ಞಾನಿ ದಿ|| ಲಕ್ಷ್ಮಣಯ್ಯನವರ ಹೆಸರನ್ನು ಮಂಡ್ಯ ನಗರದಿಂದ ಶಿವಳ್ಳಿಗೆ ಹೋಗುವ ರಸ್ತೆಗೆ ಡಾ|| ರಾಗಿಲಕ್ಷ್ಮಣಯ್ಯ ರಸ್ತೆ ಎಂದು ನಾಮಕರಣ ಮಾಡಲು ಸರ್ಕಾರದ ಮಂಜೂರಾತಿ ಕುರಿತು.

ಓದಲಾಗಿದೆ:— ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆರವರ ಪತ್ರ ಸಂಖ್ಯೆ: ಮುನಸಿ(1):ಸಿಆರ್:193:98–99, ದಿನಾಂಕ:17–9–98.

—o—

ಪ್ರಸ್ತಾವನೆ:—

ಮೇಲೆ ಓದಲಾದ ಪತ್ರದಲ್ಲಿ ದಿನಾಂಕ:20–1–98ರ ನಗರಸಭೆ ಕೌನ್ಸಿಲ್ ನಿರ್ಣಯದಂತೆ ಪ್ರಾಂಶುಪಾಲರು ಕೃಷಿ ವಿಶ್ವವಿದ್ಯಾನಿಲಯ ವಿ.ಸಿ. ಫಾರಂ, ಮಂಡ್ಯ ಇವರ ಕೋರಿಕೆಯಂತೆ ರಾಗಿ ತಳಿ ಅಭಿವೃದ್ಧಿ ಪಡಿಸಿದ ವಿಜ್ಞಾನಿ ಡಾ:ಲಕ್ಷ್ಮಣಯ್ಯ ಇವರ ಹೆಸರನ್ನು ಮಂಡ್ಯ ನಗರದ ಹೊಸಹಳ್ಳಿ ವೃತ್ತದಿಂದ ಶಿವಳ್ಳಿ ಕಡೆಗೆ ಹೋಗುವ ರಸ್ತೆಗೆ ಡಾ: ರಾಗಿ ಲಕ್ಷ್ಮಣಯ್ಯ ಎಂದು ನಾಮಕರಣ ಮಾಡಲು ಸಭೆ ಸರ್ವಾನುಮತದಿಂದ ನಿರ್ಣಯಿಸಿದ್ದು ಮೇಲ್ಕಂಡ ಸಾರ್ವಜನಿಕರ ಆಕ್ಷೇಪಣೆ ಕೋರಿ ನಿಯಮ 39ರ ಪ್ರಕಾರ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಅವಧಿ ಮುಗಿದರೂ ಯಾವುದೇ ಆಕ್ಷೇಪಣೆಗಳು ಬಂದಿಲ್ಲವೆಂದು ಸರ್ಕಾರಕ್ಕೆ ವರದಿ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 105 [illegible] 98, ಬೆಂಗಳೂರು, ದಿನಾಂಕ:24–6–1999.

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಮಂಡ್ಯ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಮಂಡ್ಯ ನಗರದಿಂದ ಅಂದರೆ ಇಂದಿರಾ ವೃತ್ತ(ಹೊಸಹಳ್ಳಿ ವೃತ್ತ)ದಿಂದ ಶಿವಳ್ಳಿ ಕಡೆಗೆ ಹೋಗುವ ರಸ್ತೆಗೆ( ವಿ.ಸಿ. ಫಾರಂ ರಸ್ತೆ) ''ಡಾ: ರಾಗಿಲಕ್ಷ್ಮಣಯ್ಯ ರಸ್ತೆ ಎಂದು'' ನಾಮಕರಣ ಮಾಡಲು ಸಭೆಯು ಒಪ್ಪಿ ತೀರ್ಮಾನಿಸಿದನ್ವಯ ಸರ್ಕಾರವು ಕರ್ನಾಟಕ ಪುರಸಭೆ ಕಾಯಿದೆ 1964ರ ಕಲಂ 211(1) ರನ್ವಯ ಸರ್ಕಾರದ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಎನ್.ಸತ್ಯನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಗೆ:—
1) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು
2) ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ.
3) ಪೌರಾಯುಕ್ತರು, ನಗರಸಭೆ, ಮಂಡ್ಯ.
4) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

ಪ್ರತಿಗಳು:—
1) ಮಾನ್ಯ ಪೌರಾಡಳಿತ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು,
2) ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ/ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು ನಗರಾಭಿವೃದ್ಧಿ ಇಲಾಖೆ.

Scanned with AnyScanner

(ಕ) ಸಾರ್ವಜನಿಕ ಬೀದಿಯ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕೆ ಅಡ್ಡಿಯಾಗುವ ಹಾಗೆ, ಯಾವುದೇ ಅಂಥ ಬೀದಿಯ ಮೇಲೆ ಬಾಗಿಯವ ಅಥವಾ ಅದರೊಳಕ್ಕೆ ಮುಂದಕ್ಕೆ ಚಾಚಿರುವ ಅಥವಾ ಯಾವುದೇ ರೀತಿಯಲ್ಲಿ ಮುಂಚಾಚಿರುವಂಥ ಅಥವಾ ಒತ್ತುವರಿಯಾಗಿರುವಂಥ; ಅಥವಾ

(ಖ) ಮೇಲ್ಗಾಲುವೆ, ಚರಂಡಿ ಅಥವಾ ಗ್ರಾಮಸಾರ ಚರಂಡಿಗೆ ಅಥವಾ ಅದರ ಸರಿಯಾದ ಕಾರ್ಯನಿರ್ವಹಣೆಗೆ ಅಡ್ಡಿ ಅಥವಾ ನಡುವೆ ಬರುವ ಹಾಗೆ ಅಂಥ ಬೀದಿಯಲ್ಲಿನ ಅಂಥ ಮುಚ್ಚಿರದ ಮೇಲ್ಗಾಲುವೆ, ಚರಂಡಿ ಅಥವಾ ಗ್ರಾಮಸಾರ ಚರಂಡಿಯೊಳಕ್ಕೆ ಅಥವಾ ಅದರ ಮೇಲೆ ಮುಂಚಾಚುವ ಅಥವಾ ಒತ್ತುವರಿ ಮಾಡುವಂಥ ಮುಂಚಾಚುವಿಕೆ, ಒತ್ತುವರಿ ಅಥವಾ ಅಡ್ಡಿಯನ್ನು ತೆಗೆದು ಹಾಕಲು ಅಥವಾ ಬದಲಾಯಿಸಲು ಯಾವುದೇ ಕಟ್ಟಡದ ಒಡೆಯ ಅಥವಾ ಅಧಿಭೋಗದಾರನನ್ನು ಬರಹದಲ್ಲಿಯ ನೋಟೀಸಿನ ಮೂಲಕ ಅಗತ್ಯಪಡಿಸಬಹುದು:

ಪರಂತು, ಮುನ್ಸಿಪಲ್ ಕೌನ್ಸಿಲು ಅಂಥ ಸ್ಥಳವು [1][ಪೌರಸಭಾ ಪ್ರದೇಶ]ದ ಭಾಗವಾದ ದಿನಾಂಕಕ್ಕೆ ಮುಂಚೆ ಅಥವಾ ಅಂಥ ದಿನಾಂಕದ ತರುವಾಯ ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಅನುಮತಿಯೊಂದಿಗೆ ಯಾವುದೇ ಸ್ಥಳದಲ್ಲಿ ಅಂಥ ಮುಂಚಾಚುವಿಕೆ, ಒತ್ತುವರಿ ಅಥವಾ ಅಡ್ಡಿಯನ್ನು ಮಾಡಲಾಗಿದ್ದರೆ ಅಂಥ ತೆಗೆದುಹಾಕುವಿಕೆ ಅಥವಾ ಬದಲಾವಣೆಯಿಂದ ಹಾನಿಗೀಡಾದ ಪ್ರತಿಯೊಬ್ಬ ವ್ಯಕ್ತಿಗೆ ಯುಕ್ತ ಪರಿಹಾರವನ್ನು ಕೊಡತಕ್ಕದ್ದು, ಮತ್ತು ಅಂಥ ನಷ್ಟ ಪರಿಹಾರದ ಮೊಬಲಗಿಗೆ ಸಂಬಂಧಿಸಿದಂತೆ ಯಾವುದೇ ವಿವಾದವು ಉದ್ಭವಿಸಿದರೆ, ಅದನ್ನು 268ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

**209. ಮಳೆ ನೀರಿಗಾಗಿ ಹರಿದೋಣಿಗಳು ಮತ್ತು ಕೊಳವೆಗಳು.**–ಮುನ್ಸಿಪಲ್ ಕೌನ್ಸಿಲು ಯಾವುದೇ ಬೀದಿಯಲ್ಲಿನ ಪ್ರತಿಯೊಂದು ಕಟ್ಟಡದ ಒಡೆಯನನ್ನು ಅಂಥ ಕಟ್ಟಡದ ಚಾವಣಿ ಮತ್ತು ಇತರ ಭಾಗಗಳಿಂದ ನೀರನ್ನು ಹಿಡಿಯಲು ಮತ್ತು ಒಯ್ಯಲು ಸೂಕ್ತ ಮತ್ತು ಅದನ್ನು ಹೊರಗೆಡಹಲು ಸರಿಯಾದ ಹರಿದೋಣಿಗಳನ್ನು ಮತ್ತು ಕೊಳವೆಗಳನ್ನು, ಬೀದಿಯಲ್ಲಿ ಓಡಾಡುವ ವ್ಯಕ್ತಿಯ ಮೇಲೆ ಅದು ಬೀಳದಂತೆ ಅಥವಾ ಬೀದಿಗೆ ಹಾನಿಯನ್ನುಂಟು ಮಾಡದಂತೆ ಅದು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಹಾಕಲು ಮತ್ತು ಸುಸ್ಥಿತಿಯಲ್ಲಿಡಲು ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

**210. ಮನೆಗಳಿಗೆ ಬ್ರ್ಯಾಕೆಟ್ಟುಗಳು ಇತ್ಯಾದಿಗಳನ್ನು ಜೋಡಿಸುವುದು.**–ಮುನ್ಸಿಪಲ್ ಕೌನ್ಸಿಲು, ಯಾವುದೇ ಕಟ್ಟಡದ ಹೊರಭಾಗದಲ್ಲಿ ಎಣ್ಣೆ ಅಥವಾ ಅನಿಲದಿಂದ ಬೆಳಗಿಸಬೇಕಾದ ದೀಪಗಳಿಗಾಗಿ, ಅಥವಾ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು ವಿದ್ಯುಚ್ಛಕ್ತಿಯಿಂದ ಅಥವಾ ಅನ್ಯಥಾ ಬೆಳಗಿಸಬೇಕಾದ ದೀಪಗಳಿಗಾಗಿ, ಟೆಲಿಗ್ರಾಫುಗಳಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಟೆಲಿಗ್ರಾಫು ತಂತಿಗಳು ಮತ್ತು ದೂರವಾಣಿ ತಂತಿಗಳಿಗಾಗಿ ಅಥವಾ ಪ್ರಯಾಣ ಸಾಧನ ಅಥವಾ ಇತರ ಉದ್ದೇಶಗಳಿಗಾಗಿ ವಿದ್ಯುಚ್ಛಕ್ತಿಯ ವಾಹನಕ್ಕಾಗಿ ಬ್ರ್ಯಾಕೆಟ್ಟುಗಳನ್ನು ಅಥವಾ ಗ್ರಾಮಸಾರ ಚರಂಡಿ ಮತ್ತು ನೀರು ಸರಬರಾಜು ಗೃಹಗಳ ಸರಿಯಾದ ವಾಯು ಸಂಚಾರಕ್ಕಾಗಿ ಅದು ಅವಶ್ಯವೆಂದು ಭಾವಿಸಬಹುದಾದಂಥ ಕೊಳವೆಗಳನ್ನು ನಿರ್ಮಿಸಬಹುದು ಅಥವಾ ಜೋಡಿಸಬಹುದು ಮತ್ತು ಅಂಥ ಬ್ರ್ಯಾಕೆಟ್ಟುಗಳು ಮತ್ತು ಕೊಳವೆಗಳನ್ನು ಸದರಿ ಕಟ್ಟಡದ ಅಧಿಭೋಗದಾರನಿಗೆ ಅಥವಾ ನೆರೆಹೊರೆಯಲ್ಲಿನ ಯಾರೇ ಇತರರಿಗೆ ಅಥವಾ ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಅಥವಾ ಉಪದ್ರವ ಉಂಟಾಗದ ಹಾಗೆ ನಿರ್ಮಿಸತಕ್ಕದ್ದು.

**211. ಬೀದಿಗಳಿಗೆ ಹೆಸರಿಡುವುದು ಮತ್ತು ಮನೆಗಳಿಗೆ ಸಂಖ್ಯೆ ಕೊಡುವುದು.**–ಮುನ್ಸಿಪಲ್ ಕೌನ್ಸಿಲು, ಕಾಲಕಾಲಕ್ಕೆ, ಪ್ರತಿಯೊಂದು ಬೀದಿಯ ಪ್ರತಿಯೊಂದು ಕೊನೆ, ಮೂಲೆ ಅಥವಾ ಪ್ರವೇಶದಲ್ಲಿ ಅಥವಾ ಅದರ ಹತ್ತಿರ ಯಾವುದೇ ಕಟ್ಟಡದ ಎದ್ದು ಕಾಣುವ ಭಾಗದ ಮೇಲೆ ಅಂಥ ಬೀದಿಯು ಗೊತ್ತಾಗಬೇಕಾದಂಥ ಹೆಸರನ್ನು ಹಾಕುವಂತೆ ಅಥವಾ ಬಣ್ಣದಲ್ಲಿ ಬರೆಯುವಂತೆ ಮಾಡತಕ್ಕದ್ದು ಮತ್ತು

1 1994ರ ಅಧಿನಿಯಮ ಸಂಖ್ಯೆ 36ರ ಮೂಲಕ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 1-6-1994ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.



Scanned with AnyScanner

ಕಾಲಕಾಲಕ್ಕೆ ಯಾವುದೇ ಕಟ್ಟಡದ ಹೊರಭಾಗದಲ್ಲಿ ಅಥವಾ ಬೀದಿಗೆ ಅಭಿಮುಖವಾದ ಅದರ ಆವರಣದ ಪ್ರವೇಶದಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಸಂಖ್ಯೆಯನ್ನು ಜೋಡಿಸಬಹುದು:

ಪರಂತು, ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಮುನ್ಸಿಪಲ್ ಕೌನ್ಸಿಲು ಯಾವುದೇ ಬೀದಿಗೆ ಹೆಸರಿಡತಕ್ಕುದಲ್ಲ ಅಥವಾ ಪುನಃ ಹೆಸರಿಡತಕ್ಕುದಲ್ಲ.

(2) ಯಾವನೇ ವ್ಯಕ್ತಿಯು, ಅಂಥ ಯಾವುದೇ ಹೆಸರು ಅಥವಾ ಸಂಖ್ಯೆಯನ್ನು, ನಾಶಪಡಿಸತಕ್ಕುದಲ್ಲ, ತೆಗೆದುಹಾಕತಕ್ಕುದಲ್ಲ, ವಿರೂಪಗೊಳಿಸತಕ್ಕುದಲ್ಲ ಅಥವಾ ಯಾವುದೇ ರೀತಿಯಲ್ಲಿ ಹಾನಿಗೊಳಿಸತಕ್ಕುದಲ್ಲ ಅಥವಾ ಬದಲಾಯಿಸತಕ್ಕುದಲ್ಲ ಅಥವಾ ಮುನ್ಸಿಪಲ್ ಕೌನ್ಸಿಲಿನ ಆದೇಶದ ಮೂಲಕ ಹಾಕಿದ ಅಥವಾ ಬಣ್ಣದಲ್ಲಿ ಬರೆಯಲಾದ ಹೆಸರು ಅಥವಾ ಸಂಖ್ಯೆಗೆ ಭಿನ್ನವಾಗಿ ಯಾವುದೇ ಬೇರೆ ಹೆಸರು ಅಥವಾ ಸಂಖ್ಯೆಯನ್ನು ಹಾಕತಕ್ಕುದಲ್ಲ ಅಥವಾ ಬಣ್ಣದಲ್ಲಿ ಬರೆಯತಕ್ಕುದಲ್ಲ.

(3) (ಕ) ಒಡೆಯ ಅಥವಾ ಅಧಿಭೋಗದಾರನ ಸಮ್ಮತಿಯಿಲ್ಲದೆಯೆ ಯಾವುದೇ ಭಿತ್ತಿಪತ್ರ, ಪ್ರಕಟಣೆ, ಪ್ರಕಟಣಾ ಪತ್ರ ಅಥವಾ ಇತರ ಕಾಗದ ಅಥವಾ ಜಾಹೀರಾತಿನ ಸಾಧನಗಳನ್ನು ಯಾವುದೇ ಕಟ್ಟಡ, ಗೋಡೆ, ಫಲಕ, ಬೇಲಿ ಅಥವಾ ಎಲ್ಲೆ, ಸ್ತಂಭ, ದೀಪದ ಕಂಬ ಅಥವಾ ಅಂಥವುಗಳ ಒಳಗೆ ಅಥವಾ ಮೇಲೆ ಅಂಟಿಸುವಲ್ಲಿ, ಅಥವಾ

(ಖ) ಹಿಂದೆ ಹೇಳಿದಂಥ ಸಮ್ಮತಿಯಿಲ್ಲದೆ ಯಾವುದೇ ಅಂಥ ಕಟ್ಟಡ, ಗೋಡೆ, ಫಲಕ, ಬೇಲಿ ಅಥವಾ ಎಲ್ಲೆ, ಸ್ತಂಭ, ದೀಪದ ಕಂಬ ಅಥವಾ ಅಂಥವುಗಳ ಮೇಲೆ ಸುಣ್ಣ ಅಥವಾ ಬಣ್ಣ ಅಥವಾ ಇತರ ಯಾವುದೇ ಆದ ರೀತಿಯಲ್ಲಿ ಬರೆಯುವ, ಕೊಳೆ ಮಾಡುವ, ವಿರೂಪಗೊಳಿಸುವ ಅಥವಾ ಗುರುತು ಮಾಡುವ ಯಾವನೇ ವ್ಯಕ್ತಿಯು ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**212. ಮುಳ್ಳುಬೇಲಿಗಳು, ಮರಗಳು ಇತ್ಯಾದಿಗಳನ್ನು ತೆಗೆದುಹಾಕುವುದು ಮತ್ತು ಸವರುವುದು.**–ಮುನ್ಸಿಪಲ್ ಕೌನ್ಸಿಲು ಬರಹದಲ್ಲಿನ ನೋಟೀಸಿನ ಮೂಲಕ ಯಾವುದೇ ಭೂಮಿಯ ಒಡೆಯ ಅಥವಾ ಅಧಿಭೋಗದಾರನನ್ನು ಯಾವುದೇ ಬೀದಿಯ ಅಂಚಿನಲ್ಲಿರುವ ಅದರ ಮುಳ್ಳು ಬೇಲಿಗಳನ್ನು, ಆ ಬೀದಿಯ ಮಟ್ಟದಿಂದ ಸದರಿ ಬೇಲಿಗಳು ನಾಲ್ಕು ಅಡಿ ಎತ್ತರವನ್ನು ಮತ್ತು ನಾಲ್ಕು ಅಡಿ ಅಗಲವನ್ನು ಮೀರದ ಹಾಗೆ ಸವರಲು ಅಥವಾ ಕತ್ತರಿಸಲು ಮತ್ತು ಯಾವುದೇ ಸಾರ್ವಜನಿಕ ಬೀದಿಯ ಮೇಲೆ ಯಾವುದೇ ರೀತಿಯಲ್ಲಿ ಮುಂದೆ ಬಾಗಿರುವ, ಅಪಾಯವನ್ನುಂಟು ಮಾಡುವ ಅಥವಾ ಅಡ್ಡಿಪಡಿಸುವಂಥ ಅಥವಾ ಮುಂದೆ ಬಾಗುವ, ಅಪಾಯವನ್ನುಂಟುಮಾಡುವ ಅಥವಾ ಅಡ್ಡಿಪಡಿಸುವ ಅಥವಾ ಅದಕ್ಕೆ ಹಾನಿಯನ್ನುಂಟು ಮಾಡುವ ಸಂಭವವಿರುವುದೆಂದು ಅದು ಭಾವಿಸುವಂಥ ಯಾವುದೇ ಸಾರ್ವಜನಿಕ ಕೆರೆ, ಬಾವಿ ಅಥವಾ ನೀರು ಸರಬರಾಜಿಗಾಗಿನ ಇತರ ವ್ಯವಸ್ಥೆಯಲ್ಲಿನ ನೀರನ್ನು ಕಲುಷಿತಗೊಳಿಸುವ ಹಾಗೆ ಅಥವಾ ಕಲುಷಿತಗೊಳಿಸುವ ಸಂಭವವಿರುವ ಹಾಗೆ ಮುಂದೆ ಬಾಗಿರುವಂಥ ಎಲ್ಲಾ ಮರಗಳನ್ನು ಅಥವಾ ಗಿಡಗೆಂಟೆಗಳನ್ನು ಕಡಿದು ಹಾಕಲು, ಸವರಲು ಅಥವಾ ಸಮರಲು ಅಗತ್ಯಪಡಿಸಬಹುದು.

## ಸಾರ್ವಜನಿಕ ಆರೋಗ್ಯ ಸುರಕ್ಷತೆ ಮತ್ತು ಅನುಕೂಲತೆಯ ಸಂವರ್ಧನೆಗಾಗಿ ಅಧಿಕಾರ

**213. ಪಾಳುಬಿದ್ದ ಅಥವಾ ಅಪಾಯಕಾರಿಯಾದ ಕಟ್ಟಡಗಳು.**–(1) ಯಾವುದೇ ಕಟ್ಟಡ ಅಥವಾ ಅದರ ಮೇಲೆ ಅಂಟಿಸಿದ ಯಾವುದೇ ಪಾಳುಬಿದ್ದ ಸ್ಥಿತಿಯಲ್ಲಿವೆಯೆಂದು ಅಥವಾ ಬೀಳುವ ಸಂಭವವಿದೆಯೆಂದು ಅಥವಾ ಅಂಥ ಕಟ್ಟಡ ಅಥವಾ ಅಂಥ ಕಟ್ಟಡದ ನೆರೆಹೊರೆಯ ಯಾವುದೇ ಇತರ ಕಟ್ಟಡ ಅಥವಾ ಸ್ಥಳದ ಸ್ವಾಧೀನದಲ್ಲಿರುವ, ಅಲ್ಲಿಗೆ ಹೋಗುವ ಅಥವಾ ಅದರ ಪಕ್ಕದಲ್ಲಿ ಹಾದು ಹೋಗುವ ಯಾವನೇ ವ್ಯಕ್ತಿಗೆ ಯಾವುದೇ ಇತರ ರೀತಿಯಲ್ಲಿ ಅಪಾಯಕಾರಿಯಾಗಿದೆಯೆಂದು ಮುನ್ಸಿಪಲ್ ಕೌನ್ಸಿಲು ಭಾವಿಸಿದರೆ, ಮುನ್ಸಿಪಲ್ ಕೌನ್ಸಿಲು, ತನಗೆ ಅವಶ್ಯವೆಂದು ಕಂಡುಬಂದರೆ, ಅಲ್ಲಿ ಹಾದುಹೋಗುವ ಮತ್ತು ಇತರ ವ್ಯಕ್ತಿಗಳ ಸಂರಕ್ಷಣೆಗಾಗಿ ಸರಿಯಾದ ಹಲಗೆ ತಟ್ಟಿಯನ್ನು ಅಥವಾ ಬೇಲಿಯನ್ನು ಕೂಡಲೇ ಹಾಕುವಂತೆ ಮಾಡತಕ್ಕದ್ದು, ಮತ್ತು ಈ ಉಪ-ಪ್ರಕರಣದ ಮೇರೆಗೆ, ಮುನ್ಸಿಪಲ್ ಕೌನ್ಸಿಲು ವಹಿಸಿದ ಎಲ್ಲಾ ವೆಚ್ಚಗಳನ್ನು ಅಂಥ ಕಟ್ಟಡದ ಒಡೆಯ ಅಥವಾ ಸ್ವಾಧೀನದಾರನಿಂದ ಸಂದಾಯವಾಗತಕ್ಕದ್ದು, ಮತ್ತು *VII*ನೇ ಅಧ್ಯಾಯದ ಮೇರೆಗೆ



Scanned with AnyScanner

**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 75 ಜಿಇಎಲ್ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 22/05/2018

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

215975

Directorate of Municipal Adm
No..........
Compl... JDD
25 MAY 2018
MOA/AD. Admin..........
DMA..........

ಇವರಿಗೆ:
ನಿರ್ದೇಶಕರು,
ಪೌರಾಡಳಿತ ಇಲಾಖೆ,
ವಿ.ವಿ.ಗೋಪುರ, ಬೆಂಗಳೂರು.

ಮಾನ್ಯರೇ,

ವಿಷಯ: ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ರಸ್ತೆ, ವೃತ್ತ ಮತ್ತು ಉದ್ಯಾನವನಗಳಿಗೆ ನಾಮಕರಣ ಮಾಡುವ ಬಗ್ಗೆ.

ಉಲ್ಲೇಖ: 1.ಜಿಲ್ಲಾಧಿಕಾರಿಗಳು, ಮಂಡ್ಯ ಇವರ ಪತ್ರ ಸಂಖ್ಯೆ:ಎಂಯುಎನ್(2)322/2016-17 ದಿನಾಂಕ:07/12/2017
2.ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ,ಇವರ ಪತ್ರ ಸಂಖ್ಯೆ:23083 ಡಿಎಂಎ 140 ಡಿಇವಿಟಿ 2017-18, ದಿ:23/01/2018

****

ಮೇಲ್ಕಂಡ ವಿಷಯ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದೊಡನೆ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಾಯಿತು.ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 211 ರಲ್ಲಿ ಪ್ರದತ್ತವಾದ ಅಧಿಕಾರದನ್ವಯ, ಮಂಡ್ಯ ನಗರಸಭೆ ವ್ಯಾಪ್ತಿಯ ವಿವಿಧ ರಸ್ತೆ,ವೃತ್ತ,ಮತ್ತು ಉದ್ಯಾನವನಗಳಿಗೆ ಈ ಕೆಳಕಂಡಂತೆ ನಾಮಕರಣ ಮಾಡಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಎಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

| ಕ್ರ ಸಂ | ನಾಮಕರಣಕ್ಕೆ ಉದ್ದೇಶಿಸಿರುವ ರಸ್ತೆ, ವೃತ್ತ/ಬಡಾವಣೆ, ಮತ್ತು ಉದ್ಯಾನವನ. | ನಾಮಕರಣ ಮಾಡಲು ತೀರ್ಮಾನಿಸಿರುವ ಹೆಸರು. |
|---|---|---|
| 1. | ವಾರ್ಡ್ ನಂ.17ರ 2ನೇ ಹಂತದಲ್ಲಿ ಬರುವ ಡಬಲ್ ಪಾರ್ಕ್‌ನಲ್ಲಿ ಬಲಗಡೆ ಬರುವ ಪಾರ್ಕ್‌ಗೆ. | ಸನ್ಮಾನ್ಯ ಶ್ರೀ ಅಂಬರೀಶ್ ಉದ್ಯಾನವನ. |

28/05/18

Scanned with AnyScanner

| | | |
|---|---|---|
| 2. | ವಾರ್ಡ್ ನಂ.17ರ 1ನೇ ಹಂತದಲ್ಲಿ ಕೃಷ್ಣಾ ಫೌಂಡೇಷನ್ ಪಕ್ಕದ ಪಾರ್ಕ್‌ಗೆ. | ದಿ॥ಶ್ರೀ.ಎಂ.ಲಿಂಗಯ್ಯ ಉದ್ಯಾನವನ. |
| 3. | ವಾರ್ಡ್ ನಂ.17ರ 1ನೇ ಹಂತದ ಕೊನೆಯ ಭಾಗದ ಡಾ॥ವಿವೇಕಾನಂದ ರಸ್ತೆಯ, ಪಕ್ಕದ ರಸ್ತೆಯಲ್ಲಿ ಬರುವ ಪಾರ್ಕ್‌ಗೆ. | ಶ್ರೀ.ಎಂ.ಎಸ್.ಆತ್ಮಾನಂದ ಉದ್ಯಾನವನ. |
| 4. | ವಾರ್ಡ್ ನಂ.17ರ ಬಿವಿಕೆ ಲೇಔಟ್ ಪಾರ್ಕ್‌ಗೆ. | ಸಂವಿಧಾನ ಶಿಲ್ಪಿ ಡಾ॥ಬಿ.ಆರ್.ಅಂಬೇಡ್ಕರ್ ಉದ್ಯಾನವನ. |
| 5. | ಮಂಡ್ಯ ನಗರದ ನೂರಡಿ ರಸ್ತೆಯಿಂದ ಅಂದರೆ ಟಿವಿಎಸ್ ಶೋರೂಮ್ ಮತ್ತು ಹಳೇ ಷರೀಫ್ ಕ್ಲಿನಿಕ್ (ಅಜಾದ್ ಬಿಲ್ಡಿಂಗ್)ನಿಂದ ಶಂಕರ ನಗರಕ್ಕೆ ಹೋಗುವ ರಸ್ತೆಗೆ. | ಶ್ರೀ ಮಹಮ್ಮದ್ ಜಫ್ರುಲ್ಲಾಖಾನ್ ರಸ್ತೆ. |
| 6. | ಹೊಸಹಳ್ಳಿ ವೃತ್ತಕ್ಕೆ. | ಶ್ರೀ ಪಿ.ರುದ್ರಪ್ಪ ವೃತ್ತ. |
| 7. | ಮಂಡ್ಯ ನಗರದ ಗಾಂಧಿನಗರದ ಮುಖ್ಯರಸ್ತೆ,ಕರ್ನಾಟಕ ಬಾರ್ ಸರ್ಕಲ್ ನಿಂದ(ಗಾಂಧಿನಗರ,ಪ್ರವೇಶಿಸುವ)ಕಿತ್ತೂರು ಚನ್ನಮ್ಮ ವೃತ್ತದ ವರೆಗಿನ ರಸ್ತೆಗೆ. | ಶ್ರೀ ಶಿವ ಶರಣ ಮಡಿವಾಳ ಮಾಚಿದೇವ ರಸ್ತೆ. |
| 8. | ಮಂಡ್ಯ ನಗರದ ರೈಲ್ವೇ ನಿಲ್ದಾಣದ ಮಧ್ಯೆ ಇರುವ ದೊಡ್ಡ ಹಿಪ್ಪೆಮರ ಇರುವ (ಸಿಲ್ವರ್ ಜ್ಯೂಬಿಲಿ ಪಾರ್ಕ್ ಪಕ್ಕ ಇರುವ)ಉದ್ಯಾನವನಕ್ಕೆ. | ಪರಮಪೂಜ್ಯ ಶ್ರೀಶ್ರೀಶ್ರೀಬಾಲಗಂಗಾಧರನಾಥ ಸ್ವಾಮೀಜಿ ಉದ್ಯಾನವನ. |
| 9. | ವಾರ್ಡ್ ನಂ.30ರ ವ್ಯಾಪ್ತಿಯ ಗುತ್ತಲು ಹರಿಜನ ಕಾಲೋನಿಗೆ. | ಜೈಭೀಮ್ ಬಡಾವಣೆ. |

ತಮ್ಮ ವಿಶ್ವಾಸಿ,

(ಎಸ್.ವೀಣಾ)

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

Scanned with AnyScanner